ಸಂಚಿಕೆ
೦೧

ನವೆಂಬರ್, ೨೦೧೫

# ಬೃಂದಾವನ ವಾಣಿ

## ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



Karnataka Cultural Organization – Brindavana (KCOB) 501(C)(3), NJ

Copyright © KCO – Brindavana

ಸಂಚಿಕೆ ೦೧

ನವೆಂಬರ್, ೨೦೧೫

# ಬೃಂದಾವನ ವಾಣಿ

## ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ಪುಟಾಣಿ ಪ್ರಪಂಚ | ಪು ೧೧ |
| ಶುಭಾಶಯಗಳು | ಪು ೨- ೩ | ವನಿತಾ ವಾಣಿ | ಪು ೧೨ - ೧೩ |
| ಹಿನ್ನೋಟ | ಪು ೪- ೫ | ಕ್ರೀಡೆ | ಪು ೧೪ |
| ವ್ಯಕ್ತಿ ಪರಿಚಯ | ಪು ೬ | ಪ್ರತಿಭೆ | ಪು ೧೪ |
| ಸಾಹಿತ್ಯ ವಾಣಿ | ಪು ೭ - ೧೦ | ಮುನ್ನೋಟ | ಪು ೧೫ |



**ಸಂಪಾದಕ ಮಂಡಳಿ**



ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು



ಸರಿತ ನವಲಿ
ಸಂಪಾದಕರು



ಅಹೀಶ್ ಭಾರದ್ವಾಜ
ಸಂಪಾದಕ ವರ್ಗ



ಡಾ. ಅಶೋಕ್ ಕಟ್ಟೀಮನಿ
ಸಂಪಾದಕ ವರ್ಗ



ರಾಘವೇಂದ್ರ
ಕುಂದಲಗುರ್ಕಿ
ಸಂಪಾದಕ ವರ್ಗ



ಕೇಶವ ಪ್ರಶಾಂತ್
ಸಂಪಾದಕ ವರ್ಗ


## ಅಧ್ಯಕ್ಷರ ಮಾತು.....



**ನ್ಯೂಜೆರ್ಸಿ ಕನ್ನಡ ಬಾಂಧವರಿಗೆ ನನ್ನ ನಮಸ್ಕಾರಗಳು.**

ಸಾಹಿತ್ಯ ಭಂಡಾರದ ಆಶ್ರಯದಲ್ಲಿ, ಅಕ್ಷರ ಭಂಡಾರ ಶ್ಲಾಘನೀಯವಾಗಿ ಬೆಳೆದು ಈಗ ಬೃಂದಾವನ "ವಾಣಿ"ಯನ್ನು ಹೊರತರುತ್ತಿದೆ ಎಂದು ತಿಳಿಸಲು ಸಂತಸವಾಗುತ್ತಿದೆ. ಸಾಹಿತ್ಯ ಭಂಡಾರದ ಜವಾಬ್ದಾರಿ ಹೊತ್ತ ಸತ್ಯ ಪ್ರಸಾದ್ ಬೃಂದಾವನ ವಾಣಿಯ ಪ್ರಧಾನ ಸಂಪಾದಕರು ಕೂಡ. ಇವರ ಜೊತೆ ಸರಿತಾ ನವಲಿ ಸಂಪಾದಕಿಯಾಗಿ, ಒಂದು ಇಡೀ ತಂಡ ಕಾರ್ಯ ನಿರ್ವಹಿಸುತ್ತಿದೆ. “ಬೃಂದಾವನ ವಾಣಿ" ತಂಡಕ್ಕೆ ನನ್ನ ಶುಭಾಶಯಗಳು ! ಬೃಂದಾವನದ ಈ ವಾಹಿನಿ (ಇ-ಪತ್ರಿಕೆ) ಯುವ ಮತ್ತು ಕನ್ನಡಿಗರ ಸಾಧನೆ, ಸಣ್ಣ ಕಥೆ, ಹಾಸ್ಯ, ಚಾರಿಟಿ ಎಲ್ಲವನ್ನು ನಿಮ್ಮ ಮುಂದಿಡುತ್ತದೆ. ಒಂದು ಪದದಲ್ಲಿ ಹೇಳಬೇಕೆಂದರೆ ನ್ಯೂಜೆರ್ಸಿ ಕನ್ನಡಿಗರಿಗೆ ಒಂದು “ಸಮಗ್ರ” ಪತ್ರಿಕೆ ಆಗಿ ನಿಮ್ಮ ಪ್ರೀತಿ ಗಳಿಸುತ್ತದೆ ಎಂಬುದು ನನ್ನ ಆಶಯ. ವಿಶ್ವದ ಎಲ್ಲ ಕನ್ನಡ ಓದುಗರಿಗೆ ನಮ್ಮ ಸಣ್ಣ ಪ್ರಯತ್ನ ಹರುಷ ತರುತ್ತದೆ ಎಂಬ ಭರವಸೆ ಇದೆ. ಉತ್ಸಾಹಿ ಬೃಂದಾವನ ‘ಮಿಲನ’ ತಂಡ ನಡೆಸಿದ ಕಳೆದ ಹತ್ತು ತಿಂಗಳಿಂದ ನಗೆಹಬ್ಬ, ವಸಂತೋತ್ಸವ, ಮುಖ್ಯಮಂತ್ರಿ ನಾಟಕ, ವನವಿಹಾರ, ಗಣೇಶ ಹಬ್ಬ, ಉಪ್ಪಿ ಸ್ಟಾರ್ ನೈಟ್ ಮತ್ತು ಚಲನ ಚಿತ್ರಗಳು ಹೆಚ್ಚು ಜನರ ಪಾಲ್ಗೊಳ್ಳುವಿಕೆಯಿಂದ blockbusterಆಗಿದೆ, ನಿಮ್ಮ ಈ ಅಮೋಘ ಪ್ರೋತ್ಸಾಹ ಮಿಲನ ತಂಡಕ್ಕೆ ಹೊಸ ಹುಮ್ಮಸ್ಸು ಕೊಟ್ಟಿದೆ. ಬೃಂದಾವನ 'ಮಿಲನ' ತಂಡ, 2015 ರಿಂದ ನಿಮಗಾಗಿ ಹಲವಾರು ಹೊಸ ಚಟುವಟಿಕೆಗಳನ್ನು ಹಮ್ಮಿ ಕೊಂಡ ಸಣ್ಣ ವಿವರ ಇಲ್ಲಿದೆ.ಯುವ ಬೃಂದಾವನ: ಹೆಚ್ಚು ಹೆಚ್ಚು ಸಾಧಿಸಲೆಂದು ವ್ಯಕ್ತಿತ್ವ, ನಾಯಕತ್ವ, ವಿಕಾಸ ಮತ್ತು ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ನಮ್ಮ ಕನ್ನಡದ ಯುವ ಪೀಳಿಗೆಗಾಗಿ ಹಮ್ಮಿ ಕೊಂಡಿದ್ದೇವೆ. (yuva@brindavana.org) ಬೃಂದಾವನ ಅಕ್ಷರ ಭಂಡಾರ: ಕನ್ನಡ ಪುಸ್ತಕ ಪ್ರೇಮಿಗಳಿಗೆ 5000 ಕ್ಕೂ ಹೆಚ್ಚು ಪುಸ್ತಕಗಳನ್ನು ಒದಗಿಸಬೇಕೆಂದು ಆಶೆಯಿಂದ ಶುರುವಾಗಿ, ಕನ್ನಡ ಪುಸ್ತಕ ವಿನಿಮಯ ಮತ್ತು ಪುಸ್ತಕ ಸಂವಾದ ಬಿರುಸಾಗಿ ನಡೆದಿದೆ. (akshara@brindavana.org)

ಸಾಹಿತ್ಯ ಬೃಂದಾವನ: ಕನ್ನಡದ ಮಹಾರಥಿಗಳನ್ನು ನಮ್ಮ ಬೃಂದಾವನಕ್ಕೆ ಆಹ್ವಾನಿಸಿ, ಕನ್ನಡದ ಸಾಹಿತ್ಯದ ಅಮೋಘ ಕೊಡುಗೆಯ ಬಗ್ಗೆ ವಿಚಾರ ವಿನಿಮಯ ಮತ್ತು ಸಂವಾದ, ನಮ್ಮ ಒಂದು ಸಣ್ಣ ಪ್ರಯತ್ನ. (saahitya@brindavana.org)

ಬೃಂದಾವನ ಕನ್ನಡ ಕಲಿಸೋಣ: ಕನ್ನಡದ ಕಂದಮ್ಮಗಳಿಗೆ ನವೀನ ರೀತಿಗಳಲ್ಲಿ, ಕನ್ನಡ ಓದಲು, ಬರೆಯಲು ಸಿಹಿಯಾಗಿ ಮಾತಾಡಲು ಕಲಿಸಬೇಕೆಂಬ ಉದ್ದೇಶದಿಂದ ನ ೭ ಮೊದಲ ಕನ್ನಡ ಶಾಲೆ ಸೌತ್ ಬ್ರುನ್ಸ್ವಿಕ್ ಅಲ್ಲಿ ಆರಂಭವಾಗುತ್ತಿದೆ. (bkk@brindavana.org) ಹಲವಾರು ಜನರ ಸಹಕಾರದಿಂದ ನಮ್ಮ ಬೃಂದಾವನ website ಹೊಸ ರೂಪ ರೇಖೆಗಳೊಂದಿಗೆ ಪುನರ್ ಚಾಲನೆಗೊಂಡಿದೆ.ಸದಸ್ಯರಿಗೆ ಅನೇಕ ಮಾಹಿತಿ ಮತ್ತು ಹಲವಾರು ಸೌಲಭ್ಯಗಳು ಇದರಿಂದ ಹಂತವಾಗಿ ದೊರೆಯುವುದು www.brindavana.org ಗೆ ಭೇಟಿ ಕೊಡಿ. ಅನಸಿಕೆಗಳನ್ನು ತಿಳಿಸಿ, ಯಾವುದೇ ರೀತಿಯ ಸಹಾಯ ಮಾಡಲು ಬಯಸುವವರು president@brindavana.org ಸಂಪರ್ಕಿಸಿ.

ಬೃಂದಾವನ ‘ಮಿಲನ’ ತಂಡ 2015-16 ನ್ಯೂ ಜೆರ್ಸಿಯ ಕನ್ನಡ ಸೇವೆಗೆ ಉತ್ಸಾಹದಿಂದ ಮುನ್ನೋಡುತ್ತಿದೆ !

**-ಮಲ್ಲಿಕ್ ಪ್ರಸಾದ್**

**ಅಧ್ಯಕ್ಷರು, ಬೃಂದಾವನ**

## ಪ್ರಧಾನ ಸಂಪಾದಕರಿಂದ......

**ಬೃಂದಾವನದ ಅಕ್ಷರ ಪ್ರೇಮಿಗಳಿಗೆ ನಮಸ್ಕಾರಗಳು.**

ಇದೊಂದು ಹೊಸ ಪ್ರಯತ್ನ.

ಬೃಂದಾವನದ ಹೆಮ್ಮೆಯ ಸಾಧನೆ 'ಅಕ್ಷರ ಬೃಂದಾವನ' ಪ್ರಾರಂಭವಾದ ನಂತರ ನಮ್ಮಲ್ಲಿ ಪುಸ್ತಕ ಮೋಹಿಗಳ ಗುಂಪೊಂದು ರೂಪುಗೊಂಡು, ಸಾಹಿತ್ಯಿಕ ಚಟುವಟಿಕೆಗಳು ಚುರುಕುಗೊಂಡವು. ಚರ್ಚೆ, ಚಿಂತನೆ, ಸಂವಾದ ನಿರಂತರವಾಯಿತು. ಅದರ ಮುಂದುವರಿದ ಭಾಗವಾಗಿ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಟ್ಟು ಇತರ ಪ್ರಕಾರಗಳನ್ನೊಳಗೊಂಡ ಒಂದು ಸಮಗ್ರ ಸಂಚಿಕೆ-ಯನ್ನು ಹೊರ ತಂದು,ಅದು ಹೆಚ್ಚು ಕನ್ನಡ ಓದುಗರನ್ನೇಕೆ ತಲುಪಬಾರದು ಎನ್ನುವ ಆಲೋಚನೆ ಮೊಳಕೆಯೊಡೆದು ಸಾಕಾರಗೊಂಡದ್ದು ಹೀಗೆ... ನಿಮ್ಮ ಕೈಯಲ್ಲಿರುವ 'ಬೃಂದಾವನ ವಾಣಿ'.

ಇದು ನಿಮ್ಮ ಪತ್ರಿಕೆ, ನೀವೇ ಲೇಖಕರು, ನಿಮ್ಮ ಬರಹಗಳನ್ನು ಹಂಚಿಕೊಳ್ಳುವುದಕ್ಕೆ ಇದೊಂದು ವೇದಿಕೆ. ಹರಸಿ, ಬೆಳಸಿ ಮತ್ತು ಪ್ರೀತಿಯ ಮಳೆ ಸುರುಸಿ.

ನಾವೊಂದು ಸಣ್ಣ ತಂಡದೊಂದಿಗೆ ಮೊದಲನೇ ಸಂಚಿಕೆಯನ್ನು ಪ್ರಾರಂಭಿಸಿದ್ದೇವೆ. ಅಹೀಶ್, ಅಶೋಕ್ ಕಟ್ಟಿಮನಿ, ಕೇಶವ, ರಾಘವೇಂದ್ರ ಪ್ರೀತಿಯಿಂದ ಸಂಚಿಕೆಯನ್ನು ರೂಪಿಸಿದ್ದಾರೆ, ಇವರಿಗೆ ಬೆನ್ನಲುಬಾಗಿ ನಿಂತು, ಸಮಗ್ರ ಆಕಾರ ನೀಡಿ ನಿಮಗೆ ಈ ಸಂಚಿಕೆಯನ್ನು ಕೊಡುತ್ತಿರುವವರು ಸರಿತಾ. ಇವರೆಲ್ಲರಿಗೂ ನನ್ನ ಪ್ರೀತಿಯ ನಮನಗಳು.

ಕನ್ನಡದ ಸಾಹಿತ್ಯ ದಿಗ್ಗಜರಾದ, ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ, ಕಿರುತೆರೆಯ ಪುಟ್ಟಣ್ಣ, ಮೇಧಾವಿ ಟಿ ಎನ್ ಸೀತಾರಾಮ್, ಹೆಸರಾಂತ ರಂಗ ಕರ್ಮಿ ಕಪ್ಪಣ್ಣ, ಅನಿವಾಸಿ ಕನ್ನಡ ಪ್ರತಿಭೆ ಮೈಶ್ರೀ, ಶ್ರೀವತ್ಸ ಜೋಷಿ ಶುಭಾಶಯಗಳನ್ನು ಕಳುಹಿಸಿದ್ದಾರೆ, ಸಮಕಾಲೀನ ಶ್ರೇಷ್ಠ ಬರಹಗಾರ ಜೋಗಿ, ಪ್ರಖ್ಯಾತಿ ಹಾಸ್ಯ ಕವಿ ದುಂಡಿರಾಜ್ ಶುಭಾಶಯಗಳೊಂದಿಗೆ 'ಬೃಂದಾವನ ವಾಣಿ' ಗೋಸ್ಕರ ಅಂಕಣ ಮತ್ತು ಚುಟುಕು ಗಳನ್ನು ಕಳಿಸಿದ್ದಾರೆ. ನಮ್ಮ ಮೊದಲನೇ ಸಂಚಿಕೆಯಲ್ಲಿ ಇವರ ಅಕ್ಷರಗಳನ್ನು ನೋಡುವುದಕ್ಕಿಂತ ಹೆಚ್ಚಿನ ಭಾಗ್ಯ ಇನ್ನೇನಿದೆ?

ಇವರೆಲ್ಲರಿಗೂ ಬೃಂದಾವನ ವಾಣಿ ತಂಡದ ಹೃತ್ಪೂರ್ವಕ ವಂದನೆ ಗಳು ಮತ್ತು ಇವರೆಲ್ಲರಿಗೂ ನಾವು ಚಿರಋಣಿ.

ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು !!!

ಹೊಸ ವರುಷದ ದಿನ ಮುಂದಿನ ಸಂಚಿಕೆಯಲ್ಲಿ ಸಿಗೋಣ.

**-ಸತ್ಯ**

## ಸಂಪಾದಕರಿಂದ......

**ನ್ಯೂಜೆರ್ಸಿ ಕನ್ನಡ ಬಳಗಕ್ಕೆ ನಮಸ್ಕಾರಗಳು.**

’ಬೃಂದಾವನ ವಾಣಿ’ ,ಕನ್ನಡ-ಸಾಹಿತ್ಯ,ಕಲೆ,ಸಂಸ್ಕೃತಿಗಳಿಂದ ಅಲಂಕಾರಗೊಂಡ ಒಂದು ಸುಂದರವಾದ ರಥ. “ಬೃಂದಾವನ” ಕನ್ನಡ ಕೂಟದ ಪರವಾಗಿ, ತಾಯಿ ಭುವನೇಶ್ವರಿಯನ್ನು ಪೂಜಿಸಿ,ಕನ್ನಡದ ಸೇವೆಯನ್ನು ಸಲ್ಲಿಸಲು ಸಿದ್ಧವಾಗಿರುವ ತೇರು. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಕವನದ ಸಾಲುಗಳು ಹೇಳುವಂತೆ,

**’ ಓ ಎಳೆಯಿರೋ ಕನ್ನಡದ ತೇರ**
**ನೀವು ನಿಂತರುವ ನೆಲೆಗಳಿಂದ**
**ನಾವಲ್ಲರೂ ಒಂದು: ತೇರೆಳವ ಜನರು.**
**ಆ ಊರೊ , ಈ ಊರೊ**
**ಹಿಂದೆಯೋ ಮುಂದೆಯೋ**
**ಎಲ್ಲಿಯೋ ಒಂದು ಕಡೆ ಕೈ ಹಾಕಿದವರು.’**

ನಿಜ, ನಾವೆಲ್ಲರೂ ಅಮೇರಿಕದ ನ್ಯೂಜೆರ್ಸಿಯ ಕನ್ನಡ ಬಾಂಧವರು.ತೇರಿನ ಹಗ್ಗ ಹಿಡಿದೋ, ಹಗ್ಗ ಹಿಡಿದವರ ಭುಜಕ್ಕೊ,ಕೈಗೊ ನಮ್ಮ ಕೈ ತಗುಲಿಸಿ ಈ “ಬೃಂದಾವನ ವಾಣಿ”ಎಂಬ ತೇರನ್ನು ಮುನ್ನಡೆಸುತ್ತ , ಕನ್ನಡಾಂಬೆಯ ಸೇವೆಯಲ್ಲಿ ಪಾಲ್ಗೊಳ್ಳೋಣ. ಎಳೆಯೋಣ ಬನ್ನಿ ಕನ್ನಡದ ತೇರ !!

ವಾಣಿಯಲ್ಲಿ ಮೂಡಿಬರುವ ಅಂಕಣಗಳು- ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ,ಬಾಲಪ್ರತಿಭೆ, ಕ್ರೀಡೆ,ನಾಕಂಡಂತೆ. ಈ ಅಂಕಣಗಳಿಗೆ ಲೇಖನ , ಕವನ , ಕಥೆ, ಚುಟುಕುಗಳನ್ನು ಬರೆಯಬಹುದು. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರು ಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆಯಬಹುದು.ನಾಕಂಡಂತೆ - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಬಹುದು. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.ಕನ್ನಡದ ಸ್ನೇಹಿತರೆಲ್ಲರೂ “ಬೃಂದಾವನ ವಾಣಿ”ಯಲ್ಲಿ ಭಾಗಿಗಳಾಗಿ.

ನಿಮ್ಮ ಅನಿಸಿಕೆ,ಸಲಹೆಗಳಿಗೆ ಸದಾ ಸ್ವಾಗತ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

ನಿಮ್ಮೆಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು !!

ಮುಂದಿನ ಸಂಚಿಕೆಯಲ್ಲಿ ಮತ್ತೆ ಸಿಗೋಣ.

**-ಸರಿತಾ ನವಲಿ.**

ಮುಖಪುಟ ಚಿತ್ರ: ಜೋಗ ಜಲಪಾತ
ಕೃಪೆ: ಕೇಶವ ಪ್ರಶಾಂತ್

ಸಂಪಾದಕೀಯ ಪುಟ ಚಿತ್ರ:
ಉದಯಿಸುತ್ತಿರುವ ಸೂರ್ಯ



Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

# ಬೃಂದಾವನ ವಾಣಿಗೆ ಮಿಲನ ತಂಡದ ಶುಭಾಶಯಗಳು




| | | | |
|---|---|---|---|
| **KCO Brindavana - Board of Trustees for 2015-18** | | | |
| 1 | ಡಾ. ರಾಮ್ ಬ್ಯಾಂಗಲೋರ್ | Elected | |
| 2 | ಶ್ರೀ ಬೆನ್ ಕಾಂತರಾಜು | Elected | |
| 3 | ಶ್ರೀ ಸಂತೋಷ್ ಕುಮಾರ್ ಕಡಲೆಬೇಳೆ | Elected | |
| 4 | ಶ್ರೀಮತಿ ಉಷಾ ಪ್ರಸನ್ನ ಕುಮಾರ್ | Immediate Past President | |
| 5 | ಶ್ರೀ ಮಲ್ಲಿಕ್ ಪ್ರಸಾದ್ | Current President | |
| **KCO Brindavana "Milana" Tanda - 2015 -16 Executive Team** | | | |
| 1 | ಶ್ರೀ ಮಲ್ಲಿಕ್ ಪ್ರಸಾದ್ | President | Elected |
| 2 | ಶ್ರೀ ಬಸವರಾಜು ಶಿವಣ್ಣ | Vice President | Director |
| 3 | ಡಾ. ಅಶೋಕ್ ಕಟ್ಟಿಮನಿ | Secretary | Director |
| 4 | ಶ್ರೀ ಕಿರಣ್ ಅಗ್ರಹಾರ | Treasurer | Director |
| 5 | ಶ್ರೀ ಶ್ರೀಧರ ಸೂರ್ಯನಾರಾಯಣ | Jt. Treasurer | Director |
| 6 | ಶ್ರೀ ಗಿರೀಶ್ ಹೊಂಗಲ್ | Food | Director |
| 7 | ಶ್ರೀಮತಿ ರೂಪ ಭಟ್ಟ್ | Charity / Hospitality | Hon. Director |
| 8 | ಶ್ರೀಮತಿ ಸುಜಯ ರಾವ್ | Cultural | Hon. Director |
| 9 | ಶ್ರೀಮತಿ ವಿದ್ಯಾ ಕಲ್ಲೂರ್ | Fund-raising | Hon. Director |
| 10 | ಡಾ. ಶ್ರೀ ಸಾಯಿ ಗೌಡ | Marketing | Hon. Director |
| 11 | ಶ್ರೀ ಸತ್ಯ ಪ್ರಸಾದ್ | Kannada Literature | Hon. Director |
| 12 | ಶ್ರೀ ಬಾಲ ಕಳವಳ | Sports | Hon. Director |
| 13 | ಶ್ರೀ ಸುರೇಶ ಗಡಿಗಿ | Stage & Decorations | Hon. Director |
| 14 | ಶ್ರೀ ತಿರುಮಲೇಶ್ ಕೌಡ್ಲೆ | Infrastructure | Hon. Director |
| **KCOB "Milana" Other Teams** | | | |
| 1 | ಶ್ರೀ ಶ್ರೀನಿವಾಸ ಭಟ್ಟರ್ | Spirituality Head | |
| 2 | ಶ್ರೀ ದಾಶರಥಿ ಗಟ್ಟು | Brindavana Akshara Bhandara | |
| 3 | ಶ್ರೀ ಸುಹಾಸ್ ಕುಮಾರ್ | Brindavana Youth Team | |


Shivaji Teradal

# ಕನ್ನಡ ರಾಜ್ಯೋತ್ಸವದ ಶುಭಾಶಯಗಳು


Copyright © KCO – Brindavana


ಸಂಚಿಕೆ ೦೧

ನವೆಂಬರ್, ೨೦೧೫

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಶುಭ ಹಾರೈಕೆಗಳು.....



ಬೃಂದಾವನ ಕನ್ನಡ ಕೂಟದ ವತಿಯಿಂದ ಪ್ರಕಟವಾಗುತ್ತಿರುವ "ಬೃಂದಾವನ ವಾಣಿ"ಗೆ ನನ್ನ ಹಾರ್ದಿಕ ಶುಭಾಶಯಗಳು.
ಈ ಪತ್ರಿಕೆ ಹೊರ ದೇಶದಲ್ಲಿ ಇರುವ ಕನ್ನಡಿಗರಿಗೆ ' ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗು ನೀ ಕನ್ನಡವಾಗಿರು' ಎಂಬ ಸಂದೇಶ ನೀಡುವಂತಾಗಬೇಕು.
ಮುಂದಿನ ಪೀಳಿಗೆಯ ಮಕ್ಕಳನ್ನು ಆಕರ್ಷಿಸುವಂತಾಗಬೇಕು.
ಕನ್ನಡ ನಡೆ-ನುಡಿಯ ಸೇವೆಗಾಗಿ ಶ್ರಮಿಸುತ್ತಾ ಬಂದಿರುವ ಬೃಂದಾವನ ಕನ್ನಡ ಕೂಟದ ಈ ಪ್ರಯತ್ನಕ್ಕೂ ಹೆಚ್ಚಿನ ಯಶಸ್ಸು ಸಿಗಲಿ.
"ಬೃಂದಾವನ ವಾಣಿ" ನ್ಯೂಜರ್ಸಿ ಕನ್ನಡಿಗರ ಮನ ಗೆಲ್ಲಲಿ ಎಂದು ಹಾರೈಸುತ್ತೇನೆ.

**- ಡಾ. ಚಂದ್ರಶೇಖರ ಕಂಬಾರ**

**( ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ)**



ನ್ಯೂಜೆರ್ಸಿಯ ಬೃಂದಾವನ ಕನ್ನಡ ಬಳಗಕ್ಕೆ ಪ್ರೀತಿಯ ನಮಸ್ಕಾರಗಳು ಮತ್ತು ಕನ್ನಡ ರಾಜ್ಯೋತ್ಸವದ ಶುಭಾಶಯಗಳು. ನಿಮ್ಮಿಂದ "ಬೃಂದಾವನ ವಾಣಿ" ಸಂಚಿಕೆ ಹೊರ ಬರುತ್ತಿರುವ ವಿಷಯ ತಿಳಿದು ತುಂಬಾ ಸಂತೋಷವಾಯಿತು. ವಿದೇಶದಲ್ಲಿ ಕನ್ನಡದ ಸೇವೆ ಮಾಡಿಕೊಂಡು ಕನ್ನಡವನ್ನು ಉಳಿಸಿ, ಬೆಳಸುವ ನಿಮ್ಮ ಪ್ರಯತ್ನಕ್ಕೆ ಹೆಚ್ಚಿನ ಬಲ ಸಿಗಲಿ.ನಿಮ್ಮೆಲ್ಲರಿಗೂ ಹಾರ್ದಿಕ ಶುಭಾಶಯಗಳು.

**- ಟಿ.ಎನ್. ಸೀತಾರಾಮ್**



ಕಳೆದ ಹತ್ತು ವರ್ಷಗಳಿಂದ ಕನ್ನಡದ ಸೇವೆಯನ್ನು ಮಾಡುತ್ತಾ ಬಂದಿರುವ ನ್ಯೂಜೆರ್ಸಿಯ ಬೃಂದಾವನ ಈಗ "ಬೃಂದಾವನ ವಾಣಿ" ಪತ್ರಿಕೆಯನ್ನು ಕನ್ನಡ ಬಳಗಕ್ಕೆ ನೀಡುತ್ತಿರುವುದು ತುಂಬಾ ಸಂತೋಷದ ವಿಷಯ. ಬೃಂದಾವನ ಕನ್ನಡ ಕೂಟಕ್ಕೆ ಅಭಿನಂದನೆಗಳು. ಈ ಮೂಲಕ ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿಯ ಸೇವೆ ಇನ್ನೂ ಹೆಚ್ಚಿನ ಮಟ್ಟದಲ್ಲಾಗಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ.

**-ಶ್ರೀನಿವಾಸ್. ಜಿ. ಕಪ್ಪಣ್ಣ**



### ಅಕ್ಷರ ಮಾಲೆಯ ಕೊರಳಲಿ ಧರಸಿ.. . . .

ಒಂದು ಚೆಂದದ ಏಕಾಂತ ಬೇಕು.ಹಾಗಂತ ಹುಡುಕುತ್ತಾ ಹೊರಡಬೇಕಾದ ಕಾಲ ಇದು. ಅತ್ಯಂತ ದಟ್ಟಾರಣ್ಯಕ್ಕೆ ಹೋದರೂ ಅಲ್ಲಿ, ಯಾರಾದರೊಬ್ಬರು ಸಿಗುತ್ತಾರೆ. ಮಾತಾಡುತ್ತಾರೆ. ಮಾತಾಡಿಸುತ್ತಾರೆ. ಮಾತಾಡುವುದೇ ಮನುಷ್ಯನ ಪರಮೋಚ್ಚ ಧ್ಯೇಯ ಎಂಬಂತೆ ಎಫ್ಫೆಮ್ಮು ಟೀವಿ ಇಂಟರ್ ನೆಟ್ಟು ಆಡಿಯೋ ವಿಡಿಯೋ ಯ್ಯೂಟ್ಯೂಬು ವಾಟ್ಸಪ್ಪು ಫೇಸ್ ಬುಕ್ಕು ಎಲ್ಲದರಲ್ಲೂ ಬರೀ ಮಾತೇ. ಈ ಮಾತನ್ನು ಮೀರಿದ ಜಗತ್ತೊಂದರ ಹುಡುಕಾಟದಲ್ಲಿ ನಾವಿದ್ದೇವಾ? ಅಂಥ ಏಕಾಂತವನ್ನು ಹಳ್ಳಿ ಕೊಡುತ್ತದೆ. ಪರದೇಶ ಕೊಡುತ್ತದೆ ಎಂದು ಒಂದು ಕಾಲದಲ್ಲಿ ನಂಬಲಾಗುತ್ತಿತ್ತು. ಈಗ ಆ ನಂಬಿಕೆಯೂ ಹೊರಟು ಹೋಗಿದೆ. ಹೀಗಾಗಿ ಒಂದು ಮೌನದ ಸ್ಥಿತಿಯನ್ನು ನಾವೇ ಕಂಡುಕೊಳ್ಳಬೇಕು. ಆ ಮೌನ ನಮಗೆ ಯಾವ ಚಿಪ್ಪಿನೊಳಗೆ ಸಿಗುತ್ತದೆ, ಯಾವ ಕಾಕನ ಕೋಟೆಯೊಳಗೆ ತಂತ್ರಜ್ಞಾನಕ್ಕೆ ಪ್ರವೇಶವಿಲ್ಲ ಎಂದು ನಾವು ಹುಡುಕಾಡುತ್ತಲೇ ಇರಬೇಕು.ಅವಿತುಕೊಳ್ಳಲು ಸರಿಯಾದ ಜಾಗ ಯಾವುದು ಗೊತ್ತೇ? ಒಂದೊಳ್ಳೆಯ ಕತೆ, ಕವಿತೆ, ಕಾದಂಬರಿ, ಪ್ರಬಂಧ. ನೀವು ಹೆಗ್ಗಡತಿಯ ಕಾನೂರಿನ ಒಳಗೋ, ಪ್ರಾಣೇಶಾಚಾರ್ಯನ ದೂರ್ವಾಸಪುರದ ಒಳಗೋ, ರಾವ್ ಬಹದ್ದೂರರ ಗ್ರಾಮದೊಳಗೋ, ಮೂಕಜ್ಜಿಯ ಕನಸಿನೊಳಗೋ ಸೇರಿಕೊಂಡರೆ ಥಟ್ಟನೆ ಆಧುನಿಕತೆಯ ಪಿಡುಗುಗಳೆಲ್ಲ ಮಾಯವಾಗಿ, ಮತ್ತೊಂದು ಅದ್ಭುತ ರಮ್ಯ ಜಗತ್ತು ನಮ್ಮದಾಗುತ್ತದೆ. ಅಲ್ಲಿ ತಂತ್ರಜ್ಞಾನ ಇಲ್ಲ, ಬರೀ ಜ್ಞಾನ, ಧ್ಯಾನ ಮತ್ತು ಸುಮ್ಮಾನ.

ಅಂಥದ್ದೊಂದು ಲೋಕಕ್ಕೆ ಕರೆದೊಯ್ಯುವುದಕ್ಕೆಂದೇ ನನ್ನ ಗೆಳೆಯರು ಪುಟ್ಟ ಪ್ರಯತ್ನವೊಂದನ್ನು ಮಾಡುತ್ತಿದ್ದಾರೆ. ಅವರ ಈ ಯತ್ನಕ್ಕೆ ಜಯವಾಗಲಿ. ನಗರೀಕೃತ ಸ್ಥಿತಿಯಲ್ಲಿರುವ ಮನಸ್ಸುಗಳಿಗೆ ಜನಪದದ, ಜ್ಞಾನಪದದ ಸೊಗಡು, ಚೆಲುವು ದಕ್ಕುವಂತಾಗಲಿ.

ಅಕ್ಷರ ಲೋಕದಲ್ಲಿ ಕೈ ಹಿಡಿದು ನಡೆಸಲು ಸನ್ನದ್ಧರಾಗುತ್ತಿರುವ ಮಿತ್ರರಿಗೆ ಮನದುಂಬಿದ ಶುಭಾಶಯ. ಹಾರೈಕೆ, ಅಕ್ಕರೆ ಮತ್ತು ಒಂದು ಹಿಡಿ ಆತ್ಮವಿಶ್ವಾಸ.
**-ಜೋಗಿ**



ಕಡಲಾಚೆ ನ್ಯೂಜೆರ್ಸಿಯಲ್ಲಿದ್ದರು ಕನ್ನಡವನ್ನು ಪ್ರೀತಿಯಿಂದ ಆರಾಧಿಸುತ್ತಿರುವ ಅಲ್ಲಿನ ಕನ್ನಡಿಗರು ಬೃಂದಾವನ ವಾಣಿ ಎಂಬ ವಿಶೇಷ ಸಂಚಿಕೆಯನ್ನು ತರುತ್ತಿರುವ ವಿಷಯ ತಿಳಿದು ತುಂಬಾ ಸಂತೋಷವಾಯಿತು. ಹಾರ್ದಿಕ ಅಭಿನಂದನೆಗಳು.
೨೦೧೨ರಲ್ಲಿ ನಾನು ಅಲ್ಲಿಗೆ ಬಂದಾಗ ನಿಮ್ಮ ಕನ್ನಡಾಭಿಮಾನ ವನ್ನು ಕಣ್ಣಾರೆ ಕಂಡಿದ್ದೇನೆ .
ನಿಮ್ಮ ಆತಿಥ್ಯದ ಸವಿ ಉಂಡಿದ್ದೇನೆ.
ಕನ್ನಡದ ಬಗೆಗಿನ ನಿಮ್ಮ ಕಳಕಳಿ ಉತ್ಸಾಹ ಮುಂದೆಯೂ ಹೀಗೆಯೇ ಇರಲಿ ಎಂದು ಹಾರೈಸುತ್ತೇನೆ .

ನಿಮ್ಮ ವಿಶ್ವಾಸಿ
**ಎಚ್ ಡುಂಡಿರಾಜ್**



ಬೃಂದಾವನ ಕನ್ನಡ ಸಂಘದ ಸಾಹಿತ್ಯೋತ್ಸಾಹಿಗಳೆ,

ನೀವೆಲ್ಲ ಸೇರಿ ಸಾಹಿತ್ಯಕ್ಕೆ ಒತ್ತು ಕೊಡುವ "ಬೃಂದಾವನ ವಾಣಿ" ಎಂಬ "ವಿ-ಪತ್ರಿಕೆ"ಯನ್ನು ಹೊರತರಲು ನಿರ್ಧರಿಸಿರುವುದನ್ನು ಕೇಳಿ ನನಗೆ ತುಂಬಾ ಹರ್ಷವಾಗುತ್ತಿದೆ. ಸುಮಾರು ನಾಲ್ಕು ದಶಕಗಳ ಹಿಂದೆ ಸ್ಥಾಪಿತವಾದ ಅಮೆರಿಕದ ಕನ್ನಡ ಸಂಘಗಳಲ್ಲಿ ಕನ್ನಡದ ಉತ್ಸಾಹಿಗಳು ಹೊರತರುತ್ತಿದ್ದ ಕೈಬರಹದ ಕನ್ನಡ ಪತ್ರಿಕೆಗಳ ನೆನಪು ಈ ಸಂದರ್ಭದಲ್ಲಿ ನನಗೆ ಮರುಕಳಿಸುತ್ತಿದೆ. ಈಗ ಕನ್ನಡ ಸಂಘಗಳು ಅಂಚೆಯ ಮೂಲಕ ಕರಪತ್ರಗಳನ್ನು ತಲುಪಿಸುವ ಅಗತ್ಯವಿಲ್ಲ, ಎಲ್ಲ ಘೋಷಣೆಗಳೂ ವಿ-ಅಂಚೆಯ ಮೂಲಕವೇ ನಡೆಯುವ ಅಭ್ಯಾಸ ಬಂದಿದೆ. ಹೀಗೆ ವಿತರಿಸುವ ಸಮಾಚಾರಪತ್ರಗಳಲ್ಲಿ ಕಾರ್ಯಕ್ರಮಗಳ ಪಟ್ಟಿ ಮುಂತಾದ ಅಗತ್ಯ ವಿಷಯಗಳೊಂದಿಗೆ ಸಾಹಿತ್ಯಕ್ಕೂ ಒಂದಿಷ್ಟು ಅವಕಾಶವನ್ನು ಕಲ್ಪಿಸುವುದು ಮೆಚ್ಚಬೇಕಾದ ವಿಷಯ. "ಬೃಂದಾವನ ವಾಣಿ"ಯ ಬಗ್ಗೆ ನಿಮ್ಮ ಕನ್ನಡ ಸಂಘದ ಸಹೃದಯೀ ಸದಸ್ಯರು ತಾತ್ಸಾರ ಮಾಡದೇ ಪ್ರತಿ ಸಂಚಿಕೆಯನ್ನೂ ಪ್ರೀತಿಯಿಂದ ಓದುವುದೇ ಅಲ್ಲದೇ ಆಗಾಗ್ಗೆ ಅದಕ್ಕೆ ಪುಟ್ಟ ಲೇಖನಗಳನ್ನೂ ಬರೆದುಕೊಡುವರೆಂಬ ಭರವಸೆ ನನಗಿದೆ. ಈ ಪತ್ರಿಕೆಯನ್ನು ಹೊರತರುತ್ತಿರುವ ವಿಶೇಷ ಸಂದರ್ಭಕ್ಕೆ ಶುಭ ಕೋರಿ ಒಂದು ಸಂದೇಶವನ್ನು ಬರೆದುಕೊಡಲು ನನ್ನನ್ನು ಕೇಳಿ ನನ್ನಮೇಲೆ ನಿಮಗಿರುವ ಪ್ರೀತಿ, ವಿಶ್ವಾಸ ಮತ್ತು ಗೌರವವನ್ನು ತೋರಿದ್ದೀರಿ. ಅದಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳು. "ಬೃಂದಾವನ ವಾಣಿ" ಒಂದು ಒಳ್ಳೆಯ ಸಂವಹನ ಪತ್ರಿಕೆಯಾಗಿ ಮೆರೆಯಲಿ, ಬೃಂದಾವನದ ಸದಸ್ಯರಲ್ಲಿ ಕನ್ನಡಪ್ರೇಮವನ್ನು ಹೆಚ್ಚಿಸುವುದರಲ್ಲಿ ಜಯಗಳಿಸಲಿ ಎಂದು ಆಶಿಸುತ್ತೇನೆ.
ಇಂತು, ಕನ್ನಡ ಸೇವೆಯಲ್ಲಿ, ನಿಮ್ಮೊಂದಿಗೆ,
**ಮೈ.ಶ್ರೀ. ನಟರಾಜ**



"ಕನ್ನಡ, ಕನ್ನಡಿಗ, ಮತ್ತು ಕರ್ನಾಟಕ – ಇವೆಲ್ಲವನ್ನು ಕೇಂದ್ರವಾಗಿಟ್ಟುಕೊಂಡು ಸದಾ ಒಂದಲ್ಲ ಒಂದು ಹೊಸ ಚಟುವಟಿಕೆಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವ ಬೃಂದಾವನ ಕನ್ನಡ ಕೂಟದ ಹೊಸ ಯೋಜನೆ "ಬೃಂದಾವನ ವಾಣಿ" ಇ-ಸುದ್ದಿಪತ್ರಿಕೆ ಆಕರ್ಷಕವಾಗಿ ಮತ್ತು ಅದಕ್ಕಿಂತ ಮುಖ್ಯವಾಗಿ ಎಲ್ಲರಿಗೂ ಉಪಯುಕ್ತವಾಗಿ ಮೂಡಿಬರಲಿ ಎಂದು ಹಾರೈಸುತ್ತೇನೆ. ಬೃಂದಾವನ ಕುಟುಂಬಸ್ಥರ ಸಮಾಚಾರಗಳು, ವಿಚಾರಲಹರಿಗಳು, ಸಾಧನೆ-ಸಂಯೋಜನೆಗಳು ಅಕ್ಷರರೂಪದಲ್ಲಿ ಎಲ್ಲರಿಗೂ ತಿಳಿಯುವಂತೆ ಮಾಡುವ ಉದ್ದೇಶದಿಂದ ಹುಟ್ಟಿಕೊಂಡಿರುವ ಈ ಪತ್ರಿಕೆಗೆ ದೀರ್ಘಾಯುವಿರಲಿ. ಹೊಸಹೊಸ ಉತ್ಸುಕರು ಪತ್ರಿಕೆಯನ್ನು ಮುನ್ನಡೆಸಿಕೊಂಡು ಹೋಗುವಂತಾಗಲಿ. ಉದ್ದೇಶ ಅರ್ಥಪೂರ್ಣವಾಗಿ ಈಡೇರಲಿ."
**- ಶ್ರೀವತ್ಸ ಜೋಶಿ; ವಾಷಿಂಗ್ಟನ್ ಡಿಸಿ.**


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಿನ್ನೋಟ

# ಕನ್ನಡ ಕೂಟದಲ್ಲಿ ನಡೆದ ಕಾರ್ಯಕ್ರಮಗಳ ಪಕ್ಷಿ ನೋಟ




## ಗಣೇಶೋತ್ಸವ ೨೦೧೫

ನ್ಯೂಜೆರ್ಸಿ ಬೃಂದಾವನ ಕನ್ನಡ ಕೂಟದ ಆಶ್ರಯದಲ್ಲಿ ಈ ವರ್ಷದ ಗಣೇಶೋತ್ಸವ ಸೆಪ್ಟೆಂಬರ್ ೧೯ ರಂದು, ಮಿಲನ ತಂಡದ ನೇತೃತ್ವದಲ್ಲಿ ಕ್ರಾಸ್ ರೋಡ್ ನಾರ್ತ್ ಮಾಧ್ಯಮಿಕ ಶಾಲೆ, ಸೌತ್ ಬ್ರನ್ಸ್‌ವಿಕ್ ನಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು.

ಸಾಹಿತ್ಯ ಬೃಂದಾವನದ ಅಮೋಘ ಕಾರ್ಯಕ್ರಮಗಳ ಜೊತೆಗೆ, ಅತ್ಯದ್ಭುತವಾದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಕಿಕ್ಕಿರಿದು ತುಂಬಿದ್ದ ಜನರನ್ನು ಮೋಡಿ ಮಾಡಿದ್ದವು. ಸುಮಾರು ೨೫೦ಕ್ಕೂ ಹೆಚ್ಚು ಕನ್ನಡ ಬಾಂಧವರು ಒಟ್ಟಾಗಿ ಸೇರಿ, ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದು ಬಹಳ ಹೆಮ್ಮೆಯ ವಿಷಯ.



ರಸವತ್ತಾದ ಕಡುಬಿನ ಭೋಜನದ ನಂತರ ಗಣೇಶ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮಗಳು ಹೊತ್ತು ಮುಳುಗುವವರೆಗೆ, ಒಂದಾದ ಮೇಲೆ ಒಂದರಂತೆ ಜನರ ಮನ ರಂಜಿಸಿದವು. ಶುಭಾ ಧನಂಜಯರವರ ವಿವಿಧ ಶೈಲಿಯ ನಾಟ್ಯ ಪ್ರದರ್ಶನ ಹಾಗು ಪೇರಿಣಿಯಂತೂ ನಯನಗಳಿಗೆ ಹಬ್ಬವನ್ನು ನೀಡಿತ್ತು.

ಬೃಂದಾವನ ಸ್ಥಳೀಯ ಕಲಾವಿದರು ನಡೆಸಿಕೊಟ್ಟ ಪರ್ವತವಾಣಿಯವರ ವಾರ್ಷಿಕೋತ್ಸವ ನಾಟಕ ಹಾಗೂ ಕೆಲವು ಹಳೆಯ ಹಾಡುಗಳಿಗೆ ಮಾಡಿದ ನೃತ್ಯ, ಕಾರ್ಯಕ್ರಮಕ್ಕೆ ವಿಶೇಷ ಕಳೆ ತಂದಿತ್ತು. ಪ್ರಖ್ಯಾತ ಗಾಯಕಿ ರತ್ನಮಾಲ ಪ್ರಕಾಶ್ ಅವರ ಸುಗಮ ಸಂಗೀತ ಅಂದಿನ ಪ್ರಮುಖ ಆಕರ್ಷಣೆಯಾಗಿತ್ತು, ಹಾಗೂ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದಿತ್ತು. ಬಂದಾವನ ಕೂಟದ ಸದಸ್ಯರಿಗೆ ರತ್ನಮಾಲ ಪ್ರಕಾಶ್-ರವರೊಂದಿಗೆ ವೇದಿಕೆಯ ಮೇಲೆ ಹಾಡುವ ವಿಶೇಷ ಅವಕಾಶವನ್ನೂ ಕಲ್ಪಿಸಲಾಗಿತ್ತು.ರತ್ನಮಾಲ ಪ್ರಕಾಶ್ ರವರ ಹಾಡುಗಳಿಗೆ ಹೊಂದುವಂತೆ ಕರ್ನಾಟಕದ ಪ್ರಖ್ಯಾತ ಕುಂಚ ಕಲಾವಿದರಾದ ಶ್ರೀ.ಬಿ.ಕೆ.ಎಸ್.ವರ್ಮಾರವರು ಸುಂದರ ಚಿತ್ರಗಳನ್ನು ಚಿತ್ರಿಸಿದರು. ಶ್ರೀ.ಬಿ.ಕೆ.ಎಸ್. ವರ್ಮಾರವರ ಕುಂಚ ಪ್ರಪಂಚ ನಿಜಕ್ಕೂ ಅದ್ಭುತ!

ಮಕ್ಕಳೆಲ್ಲರೂ ಗಣೇಶನ ಪೂಜೆ ಮಾಡುವುದರ ಜೊತೆಗೆ, ಮಣ್ಣಿನಿಂದ ಗಣೇಶನ ವಿಗ್ರಹಗಳನ್ನು ಮಾಡುವುದನ್ನು ಕಲಿತರು. ಆಯೋಜಿಸಿದ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿತು.

**- ಸುಜಯ ರಾವ್**










## ಸಾಹಿತ್ಯ ಬೃಂದಾವನದ ಶುಭಾರಂಭ..

ಕಳೆದ ಸೆಪ್ಟೆಂಬರ್ --- ರಂದು ಬೃಂದಾವನದ ಬಹು ದಿನಗಳ ಕನಸು ನನಸಾಯಿತು. ಬೃಂದಾವನ ಮಿಲನ ತಂಡ, ತನ್ನ ಸಾಹಿತ್ಯ ಬೃಂದಾವನದ ಉದ್ಘಾಟನಾ ಸಮಾರಂಭವನ್ನ ಅತ್ಯಂತ ಸಡಗರದಿಂದ ನಡೆಸಿಕೊಟ್ಟಿತು. ಕನ್ನಡ ಸಾರಸ್ವತ ಲೋಕದ ಹಲವು ದಿಗ್ಗಜರು ಈ ಸಮಾರಂಭದಲ್ಲಿ ಭಾಗವಹಿಸಿ ಸಾಹಿತ್ಯ ಬೃಂದಾವನಕ್ಕೆ ತಮ್ಮ ಶುಭ ಹಾರೈಸಿದರು.

ಸಾಹಿತ್ಯ ಬೃಂದಾವನದ ಮುಖ್ಯ ಉದ್ದೇಶ , ಕನ್ನಡ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಟ್ಟು ಹಲವಾರು ಸಾಹಿತ್ಯ ಚಟುವಟಿಕೆಗಳನ್ನ ಹಮ್ಮಿಕೊಳ್ಳುವುದು. ಈ ಕಾರ್ಯಕ್ರಮದ ಜವಾಬ್ದಾರಿಯನ್ನು ಮಿಲನ ತಂಡದ ನಿರ್ದೇಶಕರಲ್ಲಿ ಒಬ್ಬರಾದ ಶ್ರೀ ಸತ್ಯ ಪ್ರಸಾದ್ ಹೊತ್ತಿದ್ದಾರೆ. ಶ್ರೀಮತಿ ವಿನುತಾ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವನ್ನು ಅತಿಥಿಗಳು ಜ್ಯೋತಿ ಬೆಳಗುವದರ ಮೂಲಕ ಉದ್ಘಾಟಿಸಿದರು. ಅಮೇರಿಕ ಸಾಹಿತ್ಯ ರಂಗದ ಅಧ್ಯಕ್ಷರಾದ ಶ್ರೀ ಮೈಸೂರು ನಟರಾಜ ರವರು ಮಾತನಾಡಿ ಕಾರ್ಯಕ್ರಮದ ಉದ್ದೇಶವನ್ನ ಶ್ಲಾಘಿಸಿ ಹರಿಸಿದರು. ಇದೇ ಕಾರ್ಯಕ್ರಮದ ಅಂಗವಾಗಿ ಮಿಲನ ತಂಡ ಏರ್ಪಡಿಸಿದ್ದ ಕವನ ಭಾಷಾಂತರ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲ ಬರಹಗಾರರ ಕೃತಿಗಳನ್ನು ವಿಮರ್ಶಿಸಿ ಅವರ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಬೆಂಗಳೂರಿನ ಶ್ರೀ ಮಹಾಬಲ ಕೊಡ್ಲಕೆರೆಯವರು ಮಾತನಾಡಿ, ಹೊರನಾಡ ಕನ್ನಡಿಗರ ಆಸಕ್ತಿ ಮತ್ತು ಕನ್ನಡದ ಬಗ್ಗೆ ಇರುವ ಕಳಕಳಿಯನ್ನು ಶ್ಲಾಘಿಸಿದರು. ಸಾಹಿತ್ಯ ಕ್ಷೇತ್ರದಲ್ಲಿ ಹೊರನಾಡ ಕನ್ನಡಿಗರಿಂದ ಇನ್ನೂ ಬಹಳಷ್ಟು ನಿರೀಕ್ಷೆ ಮಾಡಬಹುದೆಂಬ ಅಭಿಪ್ರಾಯ ಅವರದು.ಈ ಕಾರ್ಯಕ್ರಮದಲ್ಲಿ ನಮ್ಮವರೇ ಆದ ಶ್ರೀ ಶ್ರೀವತ್ಸ ಜೋಶಿಯವರು ವಾಷಿಂಗ್ಟನ್ ನಿಂದ ಇದಕ್ಕಾಗಿಯೇ ಬಂದು ಭಾಗವಹಿಸಿದ್ದು ಒಂದು ವಿಶೇಷ. ಐಟಿಯಲ್ಲಿದ್ದರೂ ಕೂಡ ಶ್ರೀವತ್ಸ ಜೋಶಿಯವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಬೃಂದಾವನದ ಎಲ್ಲ ಕಾರ್ಯಕ್ರಮಗಳನ್ನ ಹೊಗಳಿ, ಸಾಹಿತ್ಯ ಬೃಂದಾವನದ ಈ ಪ್ರಯತ್ನಕ್ಕೆ ತಮ್ಮ ಶುಭ ಹಾರೈಸಿದರು.




ಈ ಸಮಾರಂಭದ ಮುಖ್ಯ ಆಕರ್ಷಣೆ ಬೆಂಗಳೂರಿನ ಪ್ರಸಿದ್ಧ ಕಲಾವಿದರಾದ ಡಾ. ಬಿ.ಕೆ.ಎಸ್.ವರ್ಮರವರ ಕುಂಚ ಪ್ರಪಂಚ...ಯಾವುದೇ ಗೀತೆ, ಕವನ ಮತ್ತು ಮೀಮಾಂಸೆಯನ್ನ ಕ್ಷಣ ಮಾತ್ರದಲ್ಲಿ ತಮ್ಮ ಕುಂಚದಿಂದ ಬಣ್ಣದ ಸೆರೆ ಹಿಡಿದು ಎಲ್ಲರನ್ನು ಬೆರಗು ಮಾಡಿಸುವ ಕಲೆ ಡಾ. ವರ್ಮರವರದ್ದು, ಅದನ್ನು ನೋಡುವುದೇ ಕಣ್ಣಿಗೊಂದು ಹಬ್ಬ !. ಈ ಕಾರ್ಯಕ್ರಮದ ಅಂಗವಾಗಿ ಶ್ರೀ.ಮೈಸೂರು ನಟರಾಜರವರ ಸುಂದರ ಕಾಂಡದ ಗಾಯನಕ್ಕೆ ಡಾ.ವರ್ಮರವರು ಚಿತ್ರ ಬಿಡಿಸಿದರು. ಆಂಜನೇಯನ ಸೀಮೋಲ್ಲಂಘನ, ಸೀತೆಗೆ ಚೂಡಾಮಣಿ ಕೊಡುವ ದೃಶ್ಯ ಎಲ್ಲರ ಮನ ಸೆಳೆದವು. ಡಾ.ಕೆ.ಪಿ.ಪುತ್ತೂರಾಯ ಅವರು ತಮ್ಮ ಹಾಸ್ಯದ ಮಾತುಗಾರಿಕೆಯಿಂದ ಎಲ್ಲರನ್ನು ರಂಜಿಸಿದರು. ಸಾಹಿತ್ಯ ಬೃಂದಾವನದ ಶುಭಾರಂಭಕ್ಕೆ ಇದಕ್ಕಿಂತ ಕೊಡುಗೆ ಬೇಕೆ?. ಈ ಕಾರ್ಯಕ್ರಮದಲ್ಲಿ ನಮ್ಮ ನ್ಯೂಜೆರ್ಸಿಯವರಾದ ಡಾ. ಎಂ. ಜಿ. ಪ್ರಸಾದರವರು ಭಾಗವಹಿಸಿ, ಹೊರನಾಡ ಕನ್ನಡಿಗರ ಸಾಹಿತ್ಯಾಸಕ್ತಿ ಬಗ್ಗೆ ಮಾತನಾಡಿ ಬೃಂದಾವನ ಮಿಲನ ತಂಡದ ಈ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

**- ಡಾ. ಅಶೋಕ್ ಕಟ್ಟೀಮನಿ**


Copyright © KCO – Brindavana

**ಬೃಂದಾವನ ವಾಣಿ**
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಿನ್ನೋಟ

# ಕನ್ನಡ ಕೂಟದಲ್ಲಿ ನಡೆದ ಕಾರ್ಯಕ್ರಮಗಳ ಪಕ್ಷಿ ನೋಟ......



## ಉಪ್ಪಿ ಜೊತೆ ಒಂದು ಸಂಭ್ರಮ ಸಂಜೆ!!

**ಬೃಂ**ದಾವನ ಮಿಲನ ತಂಡ ಆಯೋಜಿಸಿದ್ದ 'ಉಪ್ಪಿ ಜೊತೆ ಒಂದು ಸಂಭ್ರಮ ಸಂಜೆ' ಬಹಳ ಅದ್ದೂರಿಯಾಗಿ ನೆರವೇರಿಸಲ್ಪಟ್ಟಿತ್ತು. ಅಕ್ಬರ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಎಲ್ಲರಿಗೂ ಹಬ್ಬದ ಸಡಗರ. ಉಪೇಂದ್ರ ಅವರನ್ನು ನೋಡುವ, ಅವರೊಂದಿಗೆ ಮಾತನಾಡುವ ಕಾತುರ. ನಮ್ಮ ಆತುರತೆಯನ್ನು ಹತೋಟಿಯಲ್ಲಿಡುವುದಕ್ಕೇನೊ ಎಂಬಂತೆ, ನಮ್ಮ ಮನರಂಜನೆಗಾಗಿ ಎಂಸೀಗಳು ಹಾಗು ಡೀಜೆ ಆದರೆ, ಉದರರಂಜನೆಗೆ ರುಚಿಕರವಾದ ಊಟ ಮತ್ತು ಪಾನೀಯಗಳು.
ತುಸು ಸಮಯದ ನಂತರ ಉಪೇಂದ್ರರವರ ಆಗಮನ... ಶಿಳ್ಳೆ, ಚಪ್ಪಾಳೆ,ಖುಷಿಯ ಕೂಗಿನಿಂದ ಜನ ಅವರನ್ನು ಸ್ವಾಗತಿಸಿದರು. ಲಕ್ಷ್ಮಿ ಅವರು ಹಾಡಿದ 'ಓಂ' ಚಿತ್ರದ 'ಬ್ರಹ್ಮಾನಂದ ಓಂಕಾರ...' ಹಾಡು ಕಾರ್ಯಕ್ರಮಕ್ಕೆ ನಾಂದಿಯಾಯಿತು.
ನಂತರ ಉಪ್ಪಿ ಒಂದೆರಡು ಮಾತಾಡಿ, ಪ್ರಶ್ನೋತ್ತರದಲ್ಲಿ ಭಾಗಿಯಾದರು. ಉಪೇಂದ್ರರ ಸೌಜನ್ಯಶೀಲತೆ, ಜೀವನದ ಮೇಲೆ ಇರುವ ಪಕ್ವವಾದ ದೃಷ್ಟಿಕೋನಗಳು ಆದರ್ಶನೀಯವಾಗಿದ್ದವು.

**ಪ್ರಶ್ನೆ:** ನೀವು ಬಹಳ ಕಷ್ಟಪಟ್ಟು ಮುಂದೆ ಬಂದಿದ್ದೀರಿ. ನಮಗೆ ನಿಮ್ಮ ಕಿವಿಮಾತು ಏನು?
**ಉತ್ತರ:** ಕಷ್ಟಪಟ್ಟು ಮುಂದೆ ಬರಕ್ಕೆ ಆಗೋಲ್ಲ. ಬದುಕಬಹುದು...ಇಷ್ಟಪಟ್ಟರೆ ಮಾತ್ರ ಮುಂದೆ ಬರಲು ಸಾಧ್ಯ.

**ಪ್ರಶ್ನೆ:** ಒಬ್ಬ ಜನಪ್ರಿಯ ತಾರೆಯಾಗಿ, ನಿಮ್ಮ ವೈಯುಕ್ತಿಕ ಜೀವನವನ್ನು ನೀವು  ಹೇಗೆ ತೂಗಿಸುತ್ತೀರ?
**ಉತ್ತರ:** ನಾನು ಜೀವನದಲ್ಲಿ ಬಹಳ ವಿಕಾಸ ಹೊಂದಿದ್ದೇನೆ. ನಿನ್ನೆ, ನಾಳೆಗಳ ಬಗ್ಗೆ ಬಹಳ ಯೋಚಿಸಬಾರದು. 'ಈಗ ಸತ್ಯ'; ಮಿಕ್ಕೆಲ್ಲಾ ಸುಳ್ಳು. 'PRESENT IS GOD' ಎಷ್ಟು ಸರಳವಾಗಿ, ಉಪ್ಪಿ-ಶೈಲಿಯಲ್ಲಿ, ಎರಡು ಆಧ್ಯಾತ್ಮ ವಿಚಾರ ತಿಳಿಸಿಕೊಟ್ಟರು!

ತದನಂತರ ಒಂದು ಕಡೆ ಯುವ ಬೃಂದಾವನದ ಮಕ್ಕಳಿಂದ ಉಪ್ಪಿ ಚಿತ್ರದ ಹಾಡುಗಳ ಗಾಯನ ಮತ್ತು ನೃತ್ಯವಾದರೆ, ಇನ್ನೊಂದು ಕಡೆ ಉಪ್ಪಿಯೊಂದಿಗೆ ಛಾಯಾಚಿತ್ರ ಕ್ಲಿಕ್ಕಿಸುತ್ತಿದ್ದ ಜನ ಸಮೂಹ. ಪ್ರತಿಯೊಂದು ಊಟದ ಮೇಜಿಗೂ ಆಗಮಿಸಿ, ಹಸನ್ಮುಖಿಯಾಗಿ ತೃಪ್ತಿಯಾಗುವಷ್ಟು ಛಾಯಾಚಿತ್ರ,ಸೆಲ್ಫೀಗಳನ್ನು ತೆಗೆಸಿಕೊಂಡರು.ಸಂಭ್ರಮದ ಶೃಂಗದಂತೆ ಕೊನೆಯಲ್ಲಿ ಉಪ್ಪಿಯೊಂದಿಗೆ ಅವರ ಚಿತ್ರಗಳಿಂದ ಆಯ್ದ ಹಾಡುಗಳಿಗೆ ಬೃಂದಾವನ ಸದಸ್ಯರ ಕುಣಿತ. ಒಟ್ಟಿನಲ್ಲಿ ಉಪ್ಪಿ ಟೂ ಸಂಜೆ ನೆರೆದವರಿಗೆ ಸಜ್ಜಿಗೆಯ ಸಿಹಿ ಉಣಿಸಿತು.

**-ಅನಿಲ್ ಭಾರದ್ವಾಜ**

# ಸಹಾಯ ಹಸ್ತ

Sinchana FOUNDATION

## ಚಾರಿಟಿ ಕಾರ್ಯಕ್ರಮ

ಬೃಂದಾವನ ಗಣೇಶ ಹಬ್ಬದಂದು ನಮ್ಮ ಚಾರಿಟಿ ಟೀಂ, ರೂಪ ಭಟ್ ಅವರ ನೇತೃತ್ವದಲ್ಲಿ ಸಿಂಚನ ಫೌಂಡೇಶನ್ ಅವರ ಕಾರ್ಯಗಳಿಗೆ ದೇಣಿಗೆ ಸಂಗ್ರಹಿದರು. ಈ ಹಣದಿಂದ ಸಿಂಚನದ ಮಕ್ಕಳಿಗೆ Hearing Aid ಉಪಕರಣ ಪೂರೈಸ ಬೇಕೆಂಬುದು ನಮ್ಮ ಚಾರಿಟಿ ಟೀಮಿನ ಬಯಕೆ, "ಬೃಂದಾವನ - ಉಪ್ಪಿ ಸ್ಟಾರ್ ನೈಟ್ " ಕೂಡ ಚಾರಿಟಿ ಕಾರ್ಯಕ್ರಮ ಮಾಡಿ, ಉಪ್ಪಿ ಆಟೋಗ್ರಾಫ್ ಮಾಡಿದ ಪೋಸ್ಟರ್  ಗಳನ್ನು ಹರಾಜು ಮಾಡಿ ಅದರಿಂದ ಬಂದ ಹಣವನ್ನು ಚಾರಿಟಿಗೆ ಉಪಯೋಗಿಸಲಾಗುವುದು.

# ನಾವು ನೋಡಿದ ಸಿನೆಮಾ










# ಯುವ ಬೃಂದಾವನ



ನಮ್ಮ ಯುವ ಬೃಂದಾವನ ತಂಡ ಒಂದು ಉತ್ಸಾಹದ ಚಿಲುಮೆ ! ಪ್ರತಿ ಕಾರ್ಯಕ್ರಮದಂತೆ ಈ ಬಾರಿಯೂ YB ತಂಡ ಒಂದು ಉತ್ತಮ ಕಾರ್ಯಕ್ರಮ ನಡೆಸಿದರು. ಅಶ್ವಿನಿ ತಮ್ಮಯ್ಯ , ಮೆಗನ್ ಕೃಷ್ಣಮೂರ್ತಿ ಮತ್ತು ಪ್ರಮೋದ್ ತಮ್ಮಯ್ಯ Harvard, MIT, GWU ಗಳಲ್ಲಿ ಓದಿ ಉತ್ತಮ ಸಾಧನೆಗೈದ ಕನ್ನಡದ ಯುವ ನಾಯಕರು. ನಮ್ಮ ಕನ್ನಡದ 30 ಉದಯೋನ್ಮುಖ ಮಕ್ಕಳಿಗೆ "Pave your way to college " ಕಿವಿ ಮಾತುಗಳು, ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆ ಮತ್ತು ಶೈಕ್ಷಣಿಕ ಜಾಗತೀಕರಣದ ಬಗ್ಗೆ ಘನ ಚರ್ಚೆ ನಡೆಸಿದರು. ಈ ಒಂದು ಉತ್ತಮ ಕಾರ್ಯಕ್ರಮಕ್ಕೆ ಕಿವಿ ಕೊಟ್ಟ ನಾವುಗಳು ಕೂಡ ನಾಲ್ಕಾರು ಹೊಸ ವಿಷಯ ಕಲಿತೆವು. ಒಟ್ಟಿನಲ್ಲಿ ಉತ್ತಮ ಮುಂದಿನ ಪೀಳಿಗೆ ಕಟ್ಟಲು ನಮ್ಮ YB ತಂಡದ ಸಣ್ಣದೊಂದು ದಿಟ್ಟ ಹೆಜ್ಜೆ ಹಾಕಿದೆ, ಅವರಿಗೆ ನಮ್ಮ ಶುಭಾಶಯಗಳು!

**- ಮಲ್ಲಿಕ್ ಪ್ರಸಾದ್**


Copyright © KCO – Brindavana




# ಸಾಧನೆಯ ಹಾದಿಯಲ್ಲಿ.... ಯುವ ಕವಯಿತ್ರಿ ಕಾವ್ಯಾ ಕಡಮೆ



**ಪರಿಚಯ:**

**ಕಾ**ವ್ಯಾ ಕಡಮೆ ನಾಗರಕಟ್ಟೆ. ಬಿಎಸ್ಸಿ ನಂತರ ಕರ್ನಾಟಕ ವಿವಿಯಿಂದ ಆರು ಚಿನ್ನದ ಪದಕಗಳೊಂದಿಗೆ ಪತ್ರಿಕೋದ್ಯಮ ಎಂ.ಎ ಪದವಿ. ಸದ್ಯ ಪತಿಯೊಡನೆ ನ್ಯೂಜೆರ್ಸಿಯಲ್ಲಿ ವಾಸ. ಮೊದಲ ಕವನ ಸಂಕಲನ 'ಧ್ಯಾನಕ್ಕೆ ತಾರೀಖಿನ ಹಂಗಿಲ್ಲ'ಕ್ಕೆ ೨೦೧೪ರ ಕೇಂದ್ರ ಸಾಹಿತ್ಯ ಅಕಾಡಮಿಯ 'ಯುವ ಪುರಸ್ಕಾರ', ಯುವ ಬರಹಗಾರರಿಗೆ ನೀಡುವ ೨೦೧೨ರ ಟೋಟೋ ಪುರಸ್ಕಾರ, ಕ್ರೈಸ್ಟ ಕಾಲೇಜು ಡಾ. ಬೇಂದ್ರೆ ಕವನ ಸ್ಪರ್ಧೆ ಹಾಗೂ ಸಂಚಯದಲ್ಲಿ ಕಾವ್ಯ ಬಹುಮಾನ. ಅಕ್ಕ ಸಮ್ಮೇಳನ ಕಥಾಸ್ಪರ್ಧೆಯಲ್ಲಿ ಪ್ರಥಮ, 'ಪುನರಪಿ' ಕಾದಂಬರಿ ಡಿಸೆಂಬರ್ ನಲ್ಲಿ ಹೊರಬರುತ್ತಿದೆ. ಎರಡನೆಯ ಕವನ ಸಂಕಲನ 'ಜೀನ್ಸು ತೊಟ್ಟ ದೇವರು' ಪ್ರಕಟಣೆಯ ಹಾದಿಯಲ್ಲಿದೆ.

ಬೃಂದಾವನ ವಾಣಿ ತಂಡದವರು ಕಾವ್ಯಾರವರ ಜೊತೆ ನಡೆಸಿದ ಮಾತುಕತೆಯ ಕಿರುನೋಟ.

**೧. ಈ ಇಂಟರನೆಟ್ ಯುಗದಲ್ಲಿ ಬರವಣಿಗೆಯ ಕಡೆಗೆ ಒಲವು ಮೂಡಿದ್ದು ಹೇಗೆ?**

ನಮ್ಮ ಮನೆಯಲ್ಲಿ ತುಂಬಾ ಪುಸ್ತಕಗಳಿದ್ದವು. ನನ್ನ ತಂದೆ ತಾಯಿಗಳಿಬ್ಬರಿಗೂ ಸಾಹಿತ್ಯದಲ್ಲಿ ಅಭಿರುಚಿ, ಪರಿಶ್ರಮವಿದ್ದ ಕಾರಣ ನನಗೆ ಬರವಣಿಗೆ ಅಂದರೆ ಏನೆಂದು ತಿಳಿಯುವ ತುಂಬಾ ಮೊದಲೇ ಕನ್ನಡದ ಮಹತ್ವದ ಬರಹಗಾರರ ಕೃತಿಗಳ ಓದು ಸಾಧ್ಯವಾಗಿತ್ತು. ಕುವೆಂಪು, ಕಾರಂತ, ಬೇಂದ್ರೆ, ಅಡಿಗ, ತೇಜಸ್ವಿ, ಅನಂತಮೂರ್ತಿ, ಲಂಕೇಶ್ ,ಭೈರಪ್ಪ, ಕಾರ್ನಾಡ್, ಕಂಬಾರ್, ಜಯಂತ್, ವೈದೇಹಿ, ಪ್ರತಿಭಾ, ವಿವೇಕ್, ವಸುಧೇಂದ್ರ, ಜೋಗಿ ಸೇರಿದಂತೆ ಎಷ್ಟೋ ಬರಹಗಾರರ ಸಂಕಲನಗಳ ಕುರಿತು ನಮ್ಮ ಮನೆಯಲ್ಲಿಯೇ ಬಿಸಿಬಿಸಿ ಚರ್ಚೆಗಳಾಗುತ್ತಿದ್ದವು. ಇದೇ ನನಗೆ ಎಳವೆಯಲ್ಲಿಯೇ ಸ್ಫೂರ್ತಿ ಕೊಟ್ಟು ಬರವಣಿಗೆಯ ಕುರಿತಾದ ಕುತೂಹಲಕ್ಕೆ ಎಡೆಮಾಡಿತ್ತು ಅನ್ನಿಸುತ್ತದೆ.

**೨. ನವ್ಯ, ನವೋದಯ ಮುಗಿದ ಈ ಕಾಲಘಟ್ಟವನ್ನು ಹೇಗೆ ನೋಡುವಿರಿ ?**

ಕನ್ನಡ ಸಾಹಿತ್ಯ ಚಳುವಳಿಗಳ ಬಗ್ಗೆ ಮಾತನಾಡಲು ನಾನು ತುಂಬಾ ಚಿಕ್ಕವಳು. "We work because it is a chain reaction, each subject leads to the next" ಅಂತನ್ನುವ ಚಾರ್ಲ್ಸ್ ಈಮ್ಸ್ ಮಾತಿನಲ್ಲಿ ನನಗೆ ಅಪಾರ ನಂಬಿಕೆ. ಯಾವುದೇ ಕಾಲಘಟ್ಟದಲ್ಲಿಯೂ ಬರಹಗಾರನ/ಳ ಅಂತಃಪ್ರಜ್ಞೆಯಲ್ಲುಳಿವ ಸಂಕಟ, ಕಳವಳ, ಖುಷಿ ಒಂದೇ ಎಂದು ನಾನು ಮನಃಪೂರ್ವಕವಾಗಿ ಒಪ್ಪುತ್ತೇನೆ.

**೩ .ನಿಮ್ಮ ಕಾವ್ಯಗಳಲ್ಲಿ ಯಾವ ಭಾವಗಳನ್ನು ಕಾಣಬಹುದು? ನಿಮ್ಮ ಗದ್ಯದ ಮೂಲ ಹುಡುಕಾಟವೇನು ?**

ಒಂದು ಪದ್ಯದ ಅಥವಾ ಗದ್ಯದ ಭಾವ ಆ ಕೃತಿ ಪೂರ್ಣಗೊಂಡ ಮೇಲೆಯೇ ಅನುಭವಕ್ಕೆ ಬರುತ್ತದೆ ಎನ್ನುವುದು ನನ್ನ ಅನಿಸಿಕೆ. ಹಿರಿಯ ಕವಿ ರಾಮಾನುಜನ್ ಹೇಳುವ ಹಾಗೆ "ಎದುರಿಗಿದ್ದುದನ್ನು ಕಾಣಲು ಕಣ್ಣಿದ್ದರೆ ಸಾಲದು, ಅದೃಷ್ಟ ಬೇಕು" ಎಂಬುದು ಅಕ್ಷರಶಃ ಸತ್ಯ. ಪ್ರತಿ ಬಾರಿ ಬರೆಯಲು ಶುರು ಮಾಡಿದಾಗ, ನಾನು ಈ ಪದ್ಯವನ್ನು ಬರೆಯುತ್ತಿಲ್ಲ, ಪದ್ಯವೇ ನನ್ನಿಂದ ಬರೆಸಿಕೊಳ್ಳುತ್ತಿದೆ ಎಂಬ ವಿಸ್ಮಯ ನನ್ನನ್ನು ಅಚ್ಚರಿಗೊಳಿಸಿದೆ. ಒಂದು ಪದ್ಯ ಅಥವಾ ಒಂದು ಕೃತಿ ಈ ಜಗತ್ತಿಗೆ ಬರುವಾಗ ನಾನು ಒಂದು 'ಮೀಡಿಯಮ್' ಅಷ್ಟೇ ಎಂಬುದನ್ನು ನಾನು ಆಳವಾಗಿ ನಂಬುತ್ತೇನೆ.

**೪ . ನಿಮ್ಮನ್ನು ಬೃಂದಾವನ ವಾಣಿಯ ತಂಡಕ್ಕೆ ಆಹ್ವಾನಿಸುತ್ತೇವೆ. ನಿಮ್ಮ ಅನಿಸಿಕೆ?**

ಅಮೇರಿಕೆಯ ನೆಲದಲ್ಲಿ ಕನ್ನಡದ ಉಸಿರನ್ನು ಜೀವಂತವಾಗಿಡುವ ನೆಲೆಯಲ್ಲಿ ಕಣ್ತೆರೆದಿರುವ 'ಬೃಂದಾವನ ವಾಣಿ' ನಮ್ಮೆಲ್ಲರ ಹೆಮ್ಮೆ. ಕನ್ನಡ ಪ್ರೇಮದ, ಕವಿಹೃದಯದ ನಿಮ್ಮ ಉತ್ಸಾಹಿ ಸಹೃದಯರ ತಂಡಕ್ಕೆ ಸೇರಲು ನನ್ನ ಮನಸ್ಸಿನಲ್ಲಿ ಅತೀವ ಅಭಿಮಾನವಿದೆ.

## 'ಧ್ಯಾನಕೆ ತಾರೀಖಿನ ಹಂಗಿಲ್ಲ' ಕವನ ಸಂಕಲನದಿಂದ ಆಯ್ದ ಕವನಗಳು




**ಕಪ್ಪು**

ನನ್ನ ಜಗದ ಬಣ್ಣ ಕಪ್ಪು.
ಕಪ್ಪು ಕೂದಲು ಕಪ್ಪು ಕಣ್ರೆಪ್ಪೆ
ಆಳಗಪ್ಪು ಮಚ್ಚೆ ಕಡುಗಪ್ಪು ಲೆಗ್ಗಿನ್
ಕಪ್ಪುಹಸಿರು ಕುರ್ತಾ ನೀಲಿಗಪ್ಪು ಬಿಂದಿ
ಕೆಂಗಪ್ಪು ದಾವಣಿ

ತಿಳಿಗಪ್ಪು ಮೋಡ ನಸುಗಪ್ಪು
ಮಣ್ಣು
ಪೂಜಿಸುವ ದೈವ ಶಿಲೆಗಪ್ಪು

ಮತ್ತೆ ನೀವು ಬಿಸಿಲಿಗೆ ಮಾತ್ರ
ಕೊಡೆ ಹಿಡಿ ಎನ್ನುತ್ತೀರಿ!

**ಬರುತ್ತೇನೆ**

ಹುಬ್ಬು ತೀಡದೇ ಗೆಜ್ಜೆ
ಕುಣಿಸದೇ ಬಳೆಯ
ಕಿಂಕಿಣಿಯಿಲ್ಲದೇ ಮುಂಗುರುಳ
ನೇವರಿಸದೇ ವ್ಯಾಕ್ಸ್ ಮಾಡದೇ
ಪಿಸುನುಡಿಯದೇ ಉಗುರಿಗೆ-
ರೆಪ್ಪೆಗೆ- ಕೆನ್ನೆಗೆ- ತುಟಿಗೆ ಬಣ್ಣ
ತಾಗಿಸದೇ ಕಣ್ಣ ಕಾಡಿಗೆಯಿಲ್ಲದೇ
ಹುಬ್ಬಿನ ನಡುವೆ ಪುಟ್ಟ ಕುಂಕುಮವಿಡದೇ
ನತ್ತನ್ನು ನಗುವಾಗ ತೋರದೇ ಸೀಳ
ಹುರಿಗೊಳಿಸದೇ
ನಾಚದೇ ನುಲಿಯದೇ ಬಳುಕದೇ
ಹಾರದೇ ತಣಿಯದೇ ಓಲೈಸದೇ
ಒಮ್ಮೆ
ನಿನ್ನ ಮುಂದೆ ಬರುತ್ತೇನೆ

ಎಂದರೆ
ನೀನೇಕೆ ಹೀಗೆ ಬೆವರಬೇಕು?

**ನಿಶಬ್ದ**

"ಏಕೆ ಹೀಗೆ ಸತಾಯಿಸುತ್ತೀ?
ನಾನೇನು ನಿನ್ನ ಬಳಿ ಚಿನ್ನ
ಬಣ್ಣ ಕೇಳಲಿಲ್ಲ"

ಅಂದುಕೊಂಡೆ. ಹೇಳಿರಲಿಲ್ಲ.

ಕೇಳಿಸಿತು ಅವನಿಗೆ.

"ಅದಾದರೂ ಕೇಳಿದ್ದರೆ ಚೆನ್ನಾಗಿತ್ತು
ಯಾವಾಗೆಂದರಾವಾಗ ಕೊಟ್ಟುಬಿಡಬಹುದಿತ್ತು"

ಹೇಳಿದನಂತೆ ಅವನೂ
ನನಗೇ ಕೇಳಿಸಲಿಲ್ಲ.


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಸಾಹಿತ್ಯ ವಾಣಿ

# ಕನ್ನಡ ಬಳಗದ ಸಾಹಿತ್ಯಾಭಿರುಚಿ

## ಸಾಹಿತ್ಯ ಬೃಂದಾವದಲ್ಲಿ  ಮೆಚ್ಚುಗೆ ಪಡೆದ ಅನುವಾದಿತ ಕವನಗಳು

ಮೂಲ ಕವನ: Midnight Lamentation by Harold Manro. ಮೂಲ ಕವನ ನೋಡಲು ಇಲ್ಲಿ ಕ್ಲಿಕ್ಕಿಸಿ

### ಮಧ್ಯ ರಾತ್ರಿಯ ವಿಲಾಪ

ನೀನು ಮತ್ತು ನಾನು ಧರಣಿ ಸೇರಿದಾಗ
ಉಸಿರಾಟ ಮುಗಿದ ಶೀತಲತೆಯಿಂದ
ಮಣಲು ಸೇರಿದ ಮುಖವಾಡದಿಂದ
ನಮಗೆಂತಹ ಏಕಾಂತತೆ..
ನಾವು ಮಾಡುವುದೇನಂತು
ನಾನಿರದ ನೀನು..
ನೀನಿಲ್ಲದ ನಾನು?

ನೀನಿರದ ಚಿಂತನೆ ನಾ ಮಾಡಲಾರೆ
ನಾನಿರದ ದುಃಖವ ನೀ ಭರಿಸಲಾರೆ
ಈ ಏಕಾಂತದ ಏಕತಾನತೆಯಲ್ಲಿ
ದೇಹ್ಯಕ್ಯಥೆ ಮಾಡುವುದೇಗಂತೊ
ನೀನಾಗಿ ನಾನು..ನನ್ನಲ್ಲಿ ನೀನು?

ಜನನದಲ್ಲಿ ಏಕತಾನ
ಸಂತೋಷದಲ್ಲಿ ಅನುರೂಪತೆ
ನಿಜಚಿಂತನೆಯಲ್ಲಿ ಸಮಾನತೆ
ವಿಚ್ಛೇದನೆಯ ಪರಿಚಿಂತನೆ..ಪರವಿಭಾಗ..
ಹೃದಯ ಮಿಡಿತ..ದಿನದ ಬೆಳಕು ನಿಲ್ಲಲು ಸಾಧ್ಯವೆ?..

ಹಾಸುಹೊಕ್ಕಾದ ರಸ್ತೆಗಳಲ್ಲಿ ಎದ್ದೋಡಿದೆ
ನಿನ್ನ ಉಸಿರಾಟದ ನೆಲೆ ಮುಟ್ಟುವತನಕ
ನಮ್ಮಿಬ್ಬರ ಮಿಲನದ ಸಂಭವ
ಹೆದರಿಕೆಯ ಕಂಠವನ್ನು ಮೀರುವ ನಿನ್ನ ಜೀವಂತ ಧ್ವನಿ
ನಮ್ಮಿಬ್ಬರ ಪ್ರೀತಿಯಲ್ಲಿ ಹಿಗ್ಗುವ ಪರಿ..

ಎಂತಹ ದುರ್ಬಲ ದೇಹವಿದು
ಅವನತಿಗಾಗಿ ಮಾಡಲ್ಪಟ್ಟ,
ಕೃಷವಾದ , ಮಸಕಾದ ಕಾಯ
ಸಾವಿನ ಚಿಂತನೆಯ ಯೋಚನೆ
ಅಂಧಕಾರದಲ್ಲಿ ಕೇಳದ ಆ ನಿನ್ನ ಉಸಿರಾಟ
ನಿಶ್ಶಬ್ದತೆ ಆವರಿಸಿದ ಕೋಣೆ..

ಹೇ..ಏಕದ್ವಯರಲ್ಲಿ ಇಳಿಬೀಳುವ ಆ ಕ್ಷಣ
ಕಳೆಗುಂದಿ ಬಿಳಿಚಿದಾ ದೇಹಕಿದೆ ಸ್ಥಳವೊಂದು
ಕಣ್ಣೀರಿನ ಗಂಟೆಯಲಿ ಜಾರುತಿಹೆ
ನಿರ್ಜೀವ ಮುಖದ ಮೇಲೆ ಬಾಡುತಿದೆ
ಹೂಗಳಾ ಇಳಿಗಳು..

ಸುರಕ್ಷಿತವಾದರು ಏನಿದೆ?
ಮನದಲ್ಲಿ ಕಾಣುವೆವಾ ಚಿರಾಯುತ್ವದ ಜೀವನ?
ಎಂತಹ ನಾಚಿಕೆಯ ವಿಷಯ..
ನಿನ್ನ ಸ್ಪೂರ್ತಿಯ ಸೆಲೆಯ ತಿಳಿಯುವ ಪರಿ
ಸ್ಪರ್ಶದಿಂದಲೊ..ವಾಕ್ಯದಿಂದಲೊ..

ಪ್ರೀತಿಯ ಹೊಳಹೊರಗಿನಿಂದ ದಾರಿ ತಿಳಿಯಲಾರೆ
ದೇಹಾಂತ್ಯ ದಾಟಿ ನಿನ್ನ ತಲುಪಲಾರೆ
ನಮ್ಮಿಬ್ಬರ ಸವಿಯುವ ದಾರಿ ಮುಂದುವರೆದರೆ
ಬೇರೆಯಾರಿಲ್ಲ ತಿಳಿಸಲು..ಮುಚ್ಚಿದಾ ಬಾಗಿಲ
ಹೊರತು

**-ರಾಘವೇಂದ್ರ ಕುಂದಲಗುರ್ಕಿ**

### ನಡುರಾತ್ರಿಯ ರೋಧನೆ

ಸ್ಥಭ್ದವಾದಾಗ ನಮ್ಮಿಬ್ಬರ ಉಸಿರಾಟ
ನಿಶಬ್ದವಾದಾಗ ನಮ್ಮೀ  ನಾಡಿ ಬಡಿತ
ಮಣ್ಣಲ್ಲಿ ಮಣ್ಣಾದಾಗ
ನೀ  ನಾನಿಲ್ಲದೆ
ನಾ ನೀನಿಲ್ಲದೆ
ಎಂತಹ  ಏಕಾಂಗಿಗಳು  ನಾವಾಗ !

ಸೈರಿಸಲಾರೆ ನಾ ಆ ದಿನ
ನೀ ನನ್ನೆದುರು ಜಗವ ತೊರೆವ ಕ್ಷಣ
ಅಥವಾ..  ನಾ ಜಗವ ತೊರೆದರೆ ನಿನ್ನಾ ಕಂಬನಿ
ಎಂತಹ ಏಕಾಂಗಿಗಳು ನಾವಾಗ
ಮಾಡುವುದಾದರೂ ಏನು
ನೀ ನಾನಾಗಲು ನಾ  ನೀನಾಗಲು !

ನಮ್ಮಿಬ್ಬರ  ನಲಿವೊಂದೇ
ಒಳಮನಸ್ಸೊಂದೇ,
ಜನ್ಮಾರ್ಥವೊಂದೇ
ನಾವಿಬ್ಬರು ಒಬ್ಬರಾಗಲು ಸಾಧ್ಯವೇ,
ಎದೆಬಡಿತ ನಿರಂತರವಾಗಲು ಸಾಧ್ಯವೇ
ಬೆಳ್ಳಂಬೆಳಕಿನ ದಿನವುಲಿಯಳಸಾಧ್ಯವೇ ?!

ಏಳಬಲ್ಲೆ  ನಾನೀಗ
ನಿನ್ನ ಉಸಿರನ್ಹಿಂಬಾಲಿಸಿ  ಓಡಬಲ್ಲೆ
ನೀ ನಿಂತೆದಡೆಯಲ್ಲಿಗೆ ಧಾವಿಸಬಲ್ಲೆ
ಮಿಗಿಲಾಯಿತು ನಿನ್ನ ಇಂಪನ
ನನ್ನೀ ಭೀತಿಯೆದುರು
ನಲಿಯೋಣ ಹಿಗ್ಗಿ ನಮ್ಮೀ ಪ್ರೀತಿಯಲ್ಲಿ !

ಅಸಹಾಯಕವೀ ದೇಹ
ನಶಿಸಿ ನಶ್ವರವಾಗುವುದೇ ಇದರ ಧ್ಯೇಯ
ಕೊನೆಯುಸಿರ ಆ ಧೀರ್ಘಾಲೋಚನೆ .,
ಕಣ್ಣೆದುರು ಆವರಿಸಲು ಆ ಕಾರ್ಗತ್ತಲೆ
ಆಲಿಸದಾದೆ ನಿನ್ನ ಉಸಿರ ಆಲಾಪನೆ
ಆವರಿಸತಾಮೌನ ಎಲ್ಲೆಡೆ !

ಓ ಎಂಥಾ ಹತಾತ್ತನೆ
ಜೋಲು ಜೋಲಾದೆವು
ಬಿಳುಚಿಕೊಂಡಿತಾ ಮೊಗಸಿರಿ,ಕುಬ್ಜವಾಯಿತೀ ದೇಹ
ಇರಬಹುದಾ ಅಂಥದೊಂದು ಜಾಗವೆಲ್ಲಿ..
ನಿರ್ಜೀವ ಮೊಗದ ಮೇಲೆ
ಮರೆಯಗುವುವು  ಪುಷ್ಪಗಳು
ಆ ಶೋಕದುಂಬಿದ ಕ್ಷಣದಲ್ಲಿ !

ಹಾಗಾದರೆ  ಕ್ಷೇಮವೇನು?
ನಿರಂತರ ಜೀವಿಸಲಾಸಧ್ಯವೇ
ನಮ್ಮೀ ಮನದಲ್ಲಿ?
ಲಜ್ಜೆಯೆನಿಸುವುದೆನಗೆ ಅರಿತಾಗ
ನಿನ್ನ ಆತ್ಮಾವಲೋಕಿಸಲು ಸ್ಪರ್ಶ,
ಸಂವಾದವೇ ಆಧಾರವೆಂದೆನಿಸಿದಾಗ !

ದಾರಿ ಕಾಣದಾಗಿದೆ ನನ್ನೀ ಪ್ರೀತಿಗೆ
ಸೇರಲಾರೆ ನಿನ್ನ ನಾ ಈ ದೇಹವಿಲ್ಲದೆ
ಹೋಗಲೇ ಬೇಕಾದಾಗ ಈ ಮಣ್ಣೊಳೊಗೆ
ಉಳಿದಿರುವುದಿಲ್ಲ ಹೇಳಲೇನೆನಗೆ
ಇನ್ನಷ್ಟು ಆಳಕ್ಕೆ ಕುಸಿದಾಗ
-ಉಳಿಯುವೆನು ಬಂಧಿತನಾಗೇ !

**-ಲಲಿತ ವೀರಭದ್ರಯ್ಯ**


Copyright © KCO – Brindavana

ಸಾಹಿತ್ಯ ವಾಣಿ

# ಕನ್ನಡ ಬಳಗದ ಸಾಹಿತ್ಯಾಭಿರುಚಿ

ಕಥೆ

## ಭಯದ ನೆರಳು - ಕೇಶವ ಪ್ರಶಾಂತ್

**ಮ**ಳೆಗಾಲದ ಒಂದು ಸಂಜೆ; ದೊಡ್ಡ ಘಂಟೆ ಬಾರಿಸಿದ ಕೂಡಲೇ ಮಕ್ಕಳೆಲ್ಲಾ ಗುಂಪಿನಲ್ಲಿ ಹೊರ ಬಂದು,ಬ್ಯಾಗು,ಕೊಡೆ ಹಿಡಿದುಕೊಂಡು ಮನೆ ಕಡೆಗೆ ಹೆಜ್ಜೆ ಹಾಕತೊಡಗಿದರು. ಮಕ್ಕಳೆಂದರೆ ಮಳೆಗೂ ಇಷ್ಟವೇನೋ.ಅಷ್ಟು ಹೊತ್ತು ಮೋಡದ ಹಿಂದೆ ಅಡಗಿದ್ದ ಹನಿಗಳು ಮಕ್ಕಳ ಜೊತೆ ಆಟವಾಡಲೆಂದೋ ಏನೋ, ಭೂಮಿಗಿಳಿದು ಸಣ್ಣ ರಾಗದೊಂದಿಗೆ ಸುರಿಯತೊಡಗಿದವು.ಶಾಲೆಯ ಘಂಟೆ ಬಾರಿಸಿದ ಕೂಡಲೇ ಬೀಗದ ಕೀಲಿಗಾಗಿ ಹೆಡ್ ಮೇಷ್ಟ್ರ ಕೋಣೆಗೆ ಹೋದ ಕಿಟ್ಟಿ. ಮೇಷ್ಟ್ರ ಮುಖವನ್ನೊಮ್ಮೆ ಕಣ್ಣಂಚಿನಲ್ಲಿ ನೋಡಿ, ಮೇಜಿನ ಮೇಲಿದ್ದ ಕೀಲಿ ಗೊಂಚಲನ್ನು ತೆಗೆದುಕೊಂಡ. ಆ ದಿನ ಮೇಷ್ಟ್ರು ಸಿಟ್ಟಾಗಿದ್ದಂತೆ ಕಂಡರು.ಅದು ಮಲೆನಾಡಿನ ತಪ್ಪಲಿನಲ್ಲಿದ್ದ ಊರೊಂದರ ಸರಕಾರಿ ಶಾಲೆ.ತೊಂಬತ್ತರ ದಶಕದಲ್ಲಿ ಮತ್ತು ಅದಕ್ಕಿಂತ ಹಿಂದೆ ಸರಕಾರೀ ಶಾಲೆಗಳಲ್ಲಿ ಕೆಲಸಕ್ಕೆಂದು ಬೇರೆ ಜನರೇನೂ ಇದ್ದಿರಲಿಲ್ಲ; ಈಗಲೂ ಸಹ. ಬೆಳಗ್ಗೆ ಶಾಲೆ ತೆರೆಯುವುದು, ಗಿಡಗಳಿಗೆ ನೀರುಣಿಸುವುದು, ಸ್ವಚ್ಛತೆ ಎಲ್ಲಾ ಮಕ್ಕಳ ಜವಾಬ್ದಾರಿ. ಸರದಿಯಲ್ಲಿ ದಿನಕ್ಕೊಬ್ಬರಿಗೆ ಒಂದೊಂದು ಕೆಲಸ. ಆ ದಿನ ಬಾಗಿಲು ಮುಚ್ಚುವ ಕೆಲಸ ಕಿಟ್ಟಿಯದ್ದು. ಸಾಯಂಕಾಲವಾದ್ದರಿಂದ ಅವನಿಗೆ, ಬೇಗನೆ ಮನೆಗೋಡುವ ಅವಸರ.ಆತುರಾತುರದಿಂದ ಎಲ್ಲಾ ಕ್ಲಾಸುಗಳ ಬಾಗಿಲು ಮುಚ್ಚಿದ ಕಿಟ್ಟಿ. ಈವಾಗಲೋ ಆವಾಗಲೋ ಕದಲಿ ಬೀಳುವಂತಿದ್ದ ಆಫೀಸು ಕೋಣೆಯ ಹಳೇ ಮರದ ಹಲಗೆಯ ಬಾಗಿಲು ಮುಚ್ಚಿ ಬೀಗ ಹಾಕುವ ಹೊತ್ತಿಗೆ ದುರಾದೃಷ್ಟವೋ ಏನೋ ಚಿಲಕ ಮುರಿದು ಕೈಯಲ್ಲೇ ಬಂತು.ಮೇಷ್ಟ್ರು ಕಿಟ್ಟಿಯ ಕಿವಿ ಹಿಡಿದು ಹಿಂಡಿದ್ದೂ,ಆರನೆಯ ಕ್ಲಾಸಿನ ಮಕ್ಕಳಿಬ್ಬರು ಅದನ್ನು ನೋಡಿ ನಕ್ಕಿದ್ದೂ ಆಯ್ತು. ಮೇಷ್ಟ್ರು ಕಿವಿ ಹಿಂಡಿದ ನೋವಿಗಿಂತಲೂ ಆರನೇ ಕ್ಲಾಸಿನ ಮಕ್ಕಳು ನಕ್ಕಿದ್ದು ಏಳನೇ ಕ್ಲಾಸಿನ ಕಿಟ್ಟಿಗೆ ದೊಡ್ಡ ವಿಷಯವಾಯಿತು.ಮುರಿದ ಚಿಲಕವನ್ನು ಸರಿಯಾಗಿ ತಂತಿ ಸೇರಿಸಿ, ಹೇಗೆ ಹೇಗೊ ಜೋಡಿಸಿ ಬೀಗ ಹಾಕಿದ ಮೇಲೂ ಕಿಟ್ಟಿಯ ಎಳೆ ಮನಸ್ಸಿನ ಮೂಲೆಯಲ್ಲಿ ಅವಮಾನವಾಯಿತೆಂಬ ಭಾವ. ಸ್ವಲ್ಪ ಹಿಂದೆ ತನ್ನನ್ನು ನೋಡೀ ನಕ್ಕ ಮಕ್ಕಳಿಬ್ಬರ ಕಣ್ಣಲ್ಲಿ ಸಣ್ಣವನಾಗಬಾರದೆಂದೆನಿಸಿ, ತನ್ನ ಧೈರ್ಯವೇನೂ ಕಡಿಮೆಯಲ್ಲವೆಂದು ಎಂದು ತೋರಿಸಲು, ಗೇಟಿನ ಬಳಿಗೆ ಕುಂಟುತ್ತಾ ನಡೆಯುತ್ತಿದ್ದ ಮೇಷ್ಟ್ರನ್ನು ನೋಡಿ "ಕುಂಟ ಕುಂಟ" ಎಂದು ಜೋರಾಗಿ ಒಮ್ಮೆ ಕಿರುಚಿದ.ಮೇಷ್ಟ್ರು ಒಂದು ಸಲ ನಿಂತು ತಿರುಗಿ ಕಿಟ್ಟಿಯನ್ನೊಮ್ಮೆ ತೀಕ್ಷ್ಣ ಕಣ್ಣುಗಳಿಂದ ನೋಡಿ, ಮೊಳಕಾಲು ನೋವಿನ ಕಾಲೆಳೆಯುತ್ತಾ ನಡೆದು ಮುಂದೆ ಹೋದರು..

ಅರೆ ಘಳಿಗೆ ತಾನು ಏನೋ ದೊಡ್ಡ ಸಾಧನೆ ಮಾಡಿ ಗೌರವ ಉಳಿಸಿಕೊಂಡೆ ಎಂದೆನಿಸಿದರೂ, ಮೇಷ್ಟ್ರು ದೂರವಾಗುತ್ತಿದ್ದಂತೆ ಕಿಟ್ಟಿಯ ಮನದಾಳದಲ್ಲಿ ಭಯದ ಮಿಂಚೊಂದು ಸಣ್ಣಗೆ ಉದಯಿಸಿ ನಿಧಾನವಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸತೊಡಗಿತು. ಮೇಷ್ಟ್ರನ್ನು ಹೀಯಾಳಿಸುವುದೆಂದರೆ ಸಣ್ಣ ವಿಷಯವಲ್ಲ. ಹೆಡ್ -ಮೇಷ್ಟ್ರ ಹೆಸರು ಕೇಳಿದರೆ ಮಕ್ಕಳಿಗೆಲ್ಲಾ ಬೆನ್ನ ಹುರಿಯಲ್ಲಿ ನಡುಕ. ಹುಣಸೆ ಮರದ ರೆಂಬೆ ಕೈಯಲ್ಲಿ ಹಿಡಿದುಕೊಂಡು ಜಗಲಿಯಲ್ಲಿ ಒಂದು ಸುತ್ತು ಬಂದರೆಂದರೆ ಎಲ್ಲರೂ ನಿಶ್ಯಬ್ದ. ಒಬ್ಬರ ಉಸಿರು ಮತ್ತೊಬ್ಬರಿಗೆ ಕೇಳಿಸುವಷ್ಟು ಮೌನ. ಅಂಥದ್ದರಲ್ಲಿ ತನ್ನ ಗತಿಯೇನೋ ಎಂಬ ಚಿಂತೆ. ತಲೆ ತಗ್ಗಿಸಿ ಮನೆಯ ಕಡೆ ನಡೆಯತೊಡಗಿದವನಿಗೆ ಮೇಷ್ಟ್ರ ತೀಕ್ಷ್ಣ ಕಂಗಳ ನೋಟ ಮತ್ತೆ ಮತ್ತೆ ಕಣ್ಣ ಮುಂದೆ ಬರಲಾರಂಭಿಸಿತು.

*****

ಕೈ ಕಾಲು ಮುಖ ತೊಳೆದು ತಟ್ಟೆಯ ಮುಂದೆ ಕುಳಿತರೆ ಅಮ್ಮ ಕಲೆಸಿ ಕೊಟ್ಟ ಅನ್ನ ಸೇರಲಿಲ್ಲ. ಮೇಷ್ಟ್ರ ಮುಂದೆ ತಲೆ ಎತ್ತಿ ನಿಲ್ಲುವ ಧೈರ್ಯ ಯಾರಿಗೂ ಇರಲಿಲ್ಲ. ಅಂಥದ್ದರಲ್ಲಿ ,ಅಡ್ಡ ಹೆಸರಿನಲ್ಲಿ, ಅದೂ ಬೇರೆ ಮಕ್ಕಳ ಮುಂದೆ, ಹೀಯಾಳಿಸಿದರೆ ತನ್ನನ್ನು ಸುಮ್ಮನೆ ಬಿಡುವುದು ದೂರದ ಮಾತು. ಮನಸ್ಸಿನ ಭಾರಕ್ಕೆ ಮುಖ ಸಣ್ಣದಾಗಿ ಅಳು ಬರುವುದೊಂದೇ ಬಾಕಿ.

*****

ಇಳಿ ಸಂಜೆಯಾಗುತ್ತಿದ್ದಂತೆ ಹೊಂಬಣ್ಣಕ್ಕೆ ತಿರುಗತೊಡಗಿದ ಆಕಾಶದೊಂದಿಗೆ ಕರಿ ಮೋಡದ ಸೈನ್ಯವೊಂದು ಯುದ್ಧ ಸಾರಿ ನಸು ಕತ್ತಲೆಯ ರಣರಂಗವನ್ನು ಹುಟ್ಟುಹಾಕಿತು.ಪಶ್ಚಿಮ ಕಡಲಿನ ಕಡೆಯಿಂದ ಓಡೋಡಿ ಬರುತ್ತಿದ್ದ ಮೋಡಗಳು ಮಲೆನಾಡಿನ ದೈತ್ಯ ಗೋಡೆಯಂತಿದ್ದ ಬೆಟ್ಟಗಳನ್ನು ದಾಟಲಾರದೆ ಒಂದಕ್ಕೊಂದು ಡಿಕ್ಕಿ ಹೊಡೆಯಲಾರಂಭಿಸಿ ಕೋಲ್ಮಿಂಚಿನ ಮಾಲೆಗಳನ್ನು ನೇಯತೊಡಗಿದವು. ಜಗಲಿಯ ಮೇಲುಗಡೆ ಮಳೆ ನೀರಿನ ಹನಿ ಒಳ ಬಾರದಂತೆ ತಡೆಯಲು ಕಟ್ಟಿದ್ದ ತೆಂಗಿನ ಗರಿಯ ಮರೆಯ ಸಂದಿಯಲ್ಲಿ ಬಾನನ್ನು ದಿಟ್ಟಿಸಿ ನೋಡುತ್ತಿದ್ದ ಕಿಟ್ಟಿ.ಮಿಂಚು ಗುಡುಗು ಜೋರಾಗುತ್ತಿದ್ದಂತೆ "ಒಳಗೆ ಬಾ" ಎಂದು ಕೂಗುತ್ತಿದ್ದ ಅಮ್ಮನ ಸ್ವರ ಕೇಳಿಸುತ್ತಿದ್ದರೂ, ಬಾನನ್ನೇ ಬಿಟ್ಟ ಕಣ್ಣುಗಳಿಂದ ನೋಡುತ್ತಿದ್ದ ಎಳೆ ಹುಡುಗನ ಮನಸ್ಸೆಲ್ಲಾ ಶೂನ್ಯ ಶೂನ್ಯ. ಹಿಂದೊಮ್ಮೆ ಮನೆಯಿಂದ ಶಾಲೆಗೆಂದು ಹೊರಟು, ಶಾಲೆಗೆ ಬರದೆ ಅಲೆದಾಡಿದ ಚಂದ್ರ ಮತ್ತು ಗಣೇಶನನ್ನು ಮಧ್ಯಾಹ್ನದ ತನಕ ಬಿಸಿಲಿನಲ್ಲಿ ನಿಲ್ಲಿಸಿದ್ದರು ಮೇಷ್ಟ್ರು. ತನ್ನನ್ನೇನಾದರೂ ಬಿಸಿಲಿನಲ್ಲಿ ನಿಲ್ಲಿಸಿದರೆ ಶಾಲೆಯ ಎಲ್ಲಾ ಮಕ್ಕಳ ಮುಂದೆ ಅದಕ್ಕಿಂತ ದೊಡ್ಡ ಅವಮಾನವಿಲ್ಲ, ಮತ್ತೆ ಯಾರಿಗೂ ಮುಖ ತೋರಿಸುವಂತಿಲ್ಲ. ಮನೆಯಲ್ಲಿ ಈ ವಿಷಯ ತಿಳಿದರಂತೂ... ದೇವರೇ... ಯೋಚಿಸಲೇ ಭಯ.

******

ಲೆಕ್ಕದ ಪುಸ್ತಕ ಬಿಡಿಸಿ ಮನೆಲೆಕ್ಕಕ್ಕೆಂದು ಕೊಟ್ಟಿದ್ದ ಮೂರು ಪ್ರಶ್ನೆಗಳನ್ನು ಪುಸ್ತಕದಲ್ಲಿ ಬರೆದ. ಉತ್ತರ ಹೊಳೆಯದೆ, ಲೆಕ್ಕ ಬಿಡಿಸಲು ತಿಳಿಯದೆ ಹಾಗೇ ಪುಸ್ತಕ ಮಡಚಿಟ್ಟು ಅಂಗಾತ ಮಲಗಿ ಸೀಮೆ ಎಣ್ಣೆ ದೀಪದ ಮಂದ ಬೆಳಕಿನಲ್ಲಿ ಮಾಡಿನ ಹಂಚುಗಳನ್ನು ದಿಟ್ಟಿಸತೊಡಗಿದ. ದೀಪದ ಸುತ್ತ ಹಾರುತ್ತಿದ್ದ ಚಿಟ್ಟೆಯ ನೆರಳು ಮಾಡಿನ ಹಂಚಿನ ಮೇಲೆ ಕ್ಷಣಕ್ಷಣಕ್ಕೂ ಒಂದೊಂದು ರೂಪ ಪಡೆಯುತ್ತಿತ್ತು. ಕಿಟ್ಟಿಯ ಮನಸ್ಸಿನಲ್ಲಿ ಭಯದ ನೆರಳು ಸಮಯ ಹೋದಂತೆ ದೊಡ್ಡ



ದೊಡ್ಡದಾಗುತ್ತಿತ್ತು.ಮೇಜಿನ ಮೇಲಿದ್ದ ರೇಡಿಯೋದಲ್ಲಿ ಕೇಳಿಬರುತ್ತಿದ್ದ 'ಕಾಲೇಜು ರಂಗ'ದ ಹಾಡು ಕಿಟ್ಟಿಯ ಗಾಯದ ಮೇಲೆ ಉಪ್ಪು ಸವರತೊಡಗಿತು."ಉಪ್ಪಾ ತಿಂದಾ ಮ್ಯಾಲೆ ನೀರಾ ಕುಡಿಯಲೇ ಬೇಕು ತಪ್ಪಾ ಮಾಡಿದ ಮ್ಯಾಲೆ ಶಿಕ್ಷೆ ಅನುಭವಿಸಲೇ ಬೇಕು".ದೇವರೇ ಕಾಪಾಡಪ್ಪಾ ಎಂದು ನೆನಪಾದ ದೇವರಿಗೆಲ್ಲಾ ಕೈ ಮುಗಿದ. ನಿದ್ದೆ ಯಾವಾಗ ಬಂತೋ ತಿಳಿಯಲಿಲ್ಲ.

******

ಬೆಳಗ್ಗೆ ಎಲ್ಲರಿಗಿಂತ ಮೊದಲು ಶಾಲೆಗೆ ಬಂದು ಜಗುಲಿಯ ಮೇಲೆ ಕುಳಿತ ಕಿಟ್ಟಿ. ಮೇಷ್ಟ್ರು ಬಂದ ಕೂಡಲೇ ಕೈ ಮುಗಿದು – "ಸಾರ್.. ನಾನು ಮಾಡಿದ್ದು ತಪ್ಪಾಯ್ತು. ಮನೆಯವರಿಗೆ ಮಾತ್ರ ಹೇಳಬೇಡಿ ಸಾರ್.." ಎಂದ ಭಯದಿಂದಲೇ..

ಎರಡು ಕ್ಷಣ ಕಿಟ್ಟಿಯ ಮುಖವನ್ನು ನೋಡಿ ಮೇಷ್ಟ್ರು – "ಪರ್ವಾಗಿಲ್ಲಪ್ಪಾ.. ಏನೇ ಕೆಲಸ ಮಾಡಿದರೂ ಜಾಗ್ರತೆ ವಹಿಸಿ ಮಾಡಬೇಕು,ಅವಸರ ಮಾಡಿದರೆ ಏನೇನೋ ಆಗಿ ಬಿಡುತ್ತದೆ. ತಗೋ.. ಹೊಸ ಬೀಗ" ಎಂದು ಹೇಳಿ ಹೊಸದೊಂದು ಬೀಗವನ್ನೂ, ಕೀಲಿಯನ್ನೂ ಜಗುಲಿಯ ಮೇಲಿಟ್ಟರು.

ಅದಾಗಿ ವರ್ಷಗಳುರುಳಿದರೂ ಮೇಷ್ಟ್ರು ಆ ದಿವಸ ಏನೂ ಮಾಡದೆ ಹಾಗೇ ಬಿಟ್ಟದ್ದೇಕೆ ಎಂದು ಕಿಟ್ಟಿಗೆ ಅರ್ಥವಾಗಲಿಲ್ಲ. ಪ್ರಾಯಶಃ ತಾನು ಕೂಗಿದ್ದು ಅವರಿಗೆ ಕೇಳಿಸಲಿಲ್ಲವೋ.. ಅಥವಾ ಮಾಡಿದ ತಪ್ಪು ತಿದ್ದಿಕೊಳ್ಳಲು ಕೊಟ್ಟ 'ಅವಕಾವೋ'?*

(ರೇಖಾಚಿತ್ರ: ಸರಿತಾ ನವಲಿ)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಸಾಹಿತ್ಯ ವಾಣಿ

# ಕನ್ನಡ ಬಳಗದ ಸಾಹಿತ್ಯಾಭಿರುಚಿ.....

## ಲೇಖನ

### ಸೃಷ್ಟಿಕರ್ತನ ಹುಡುಕುತ್ತಾ - ಅಹೀಶ್ ಭಾರದ್ವಾಜ



**ಸೃ**ಷ್ಟಿ ಎಂದಾಕ್ಷಣ ನಮ್ಮೆಲ್ಲರಿಗೂ ಕಾಡುವ ಪ್ರಶ್ನೆ , ಈ ಜಗತ್ತು ಹೇಗೆ ಸೃಷ್ಟಿಯಾಯಿತು? ಯಾರು ಸೃಷ್ಟಿಸಿದರು? ಈ ಜಗತ್ತು ಯಾವಾಗ ಅಸ್ಥಿತ್ವಕ್ಕೆ ಬಂತು? ಸೃಷ್ಟಿಕರ್ತನ ಉದ್ದೇಶವಾದರೂ ಏನು? ಈ ಜಗತ್ತಿಗೆ ಆದಿ ಅಂತ್ಯಗಳೇನು....
ಈ ಸೃಷ್ಟಿಕರ್ತನಿಗೊಬ್ಬ ಕರ್ತಾರ ಇದ್ದಾನೆಯೆ? ಹೀಗೆ ಹತ್ತು ಹಲವಾರು ಪ್ರಶ್ನೆಗಳು ನೂರಾರು ವರ್ಷಗಳಿಂದ ಈ ಮಾನವ ಕುಲಕ್ಕೆ ಒಂದು ಯಕ್ಷ ಪ್ರಶ್ನೆಯಾಗಿದೆ.

ಸುಮಾರು ನೂರು ವರ್ಷಗಳಿಂದ ಭೌತ ವಿಜ್ಞಾನ ,ತಂತ್ರಜ್ಞಾನಗಳಲ್ಲಿ ನಡೆಯುತ್ತಿರುವ ಅನೇಕ ಸಿದ್ಧಾಂತಗಳು,ಪ್ರಯೋಗಗಳು ಸೃಷ್ಟಿಯ ಬಗ್ಗೆ ಹೊಸ- ಹೊಸ ಆಯಾಮಗಳನ್ನು, ವಿಚಾರಗಳನ್ನು ಮಂಡಿಸುತ್ತಾ ಸೃಷ್ಟಿಕರ್ತನ ಹುಡುಕುವಿಕೆಯಲ್ಲಿ ಪುಟ್ಟ ಹೆಜ್ಜೆಗಳನ್ನು ಹಾಕುತ್ತಿವೆ.

******

ಯಾವುದೇ ಒಂದು ವಸ್ತುವಿನ ಸೃಷ್ಟಿಯ ಬಗ್ಗೆ ತಿಳಿಯಬೇಕಾದಲ್ಲಿ ಅತಿ ಮಹತ್ತರವಾದ ಅಂಶವೆಂದರೆ ಕಾಲ(Time).ಅಂದರೆ ಒಂದು ವಸ್ತು ಅಸ್ಥಿತ್ವಕ್ಕೆ ಬಂದ ಘಳಿಗೆ. ಈ ಕಾಲವನ್ನು ತಿಳಿಯಲು ಸಾವಿರಾರು ವರ್ಷಗಳಿಂದ ಮನುಷ್ಯನು ರೂಢಿಸಿಕೊಂಡಿರುವ ಮಾಪನ , ಸೂರ್ಯ-ಚಂದ್ರ ಹಾಗೂ ನಮ್ಮ ಭೂಮಿಯ ಚಲನವಲನ ಆಧಾರಿತ ವರ್ಷ,ದಿನ,ತಿಥಿ,ವಾರ,ದಿನ,ಘಂಟೆ, ನಿಮಿಷಗಳು. ಇದು ವಾಸ್ತವಕ್ಕೆ ಅನುಕೂಲವಾಗಿ ಮನುಷ್ಯನು ರೂಢಿಸಿಕೊಂಡ ಪದ್ಧತಿ.ಹಾಗಾದರೆ ಈ ಕಾಲವು ಯಾವಾಗ ಅಸ್ಥಿತ್ವಕ್ಕೆ ಬಂತು! ಈ ಸೌರಮಂಡಲ/ತಾರಾಪುಂಜದ ಅಸ್ಥಿತ್ವವಾದಾಗಲೇ ಕಾಲದ ಅಸ್ಥಿತ್ವವಾಯಿತೆ? ಇದೊಂದು ಪ್ರಶ್ನೆ ಬಹಳಷ್ಟು ಚಿಂತಕರಿಗೆ , ವಿಜ್ಞಾನಿಗಳಿಗೆ ಕಾಡುತ್ತಲೇ ಬಂದಿದೆ. ಈ ಕಾಲದ ಅಸ್ಥಿತ್ವವನ್ನು ತಿಳಿಯಬೇಕಾದರೆ, ಸೌರಮಂಡಲ ಅಥವ ಈ ವಿಶ್ವವು ಅಸ್ಥಿತ್ವಕ್ಕೆ ಬಂದ ಘಳಿಗೆಯನ್ನು ಅರಿಯಬೇಕು. ಸದ್ಯಕ್ಕೆ , ಈ ವಿಶ್ವದ ಅಸ್ಥಿತ್ವದ ಘಳಿಗೆ ನಮಗೆ ತಿಳಿದಿದೆ ಅಂದುಕೊಂಡಾಗ, ಅದನ್ನು ತಿಳಿದುಕೊಳ್ಳುವ ಜೊತೆಗೆ ಕಾಡುವ ಇನ್ನೊಂದು ಪ್ರಶ್ನೆ ,ಈ ವಿಶ್ವದ ಸೃಷ್ಟಿಗೆ ಕಾರಣವೇನು,ಪ್ರೇರಣೆಯೇನು?ಯಾವುದೋ ಒಂದು ಶಕ್ತಿ, ಒಂದು ನಿರ್ದಿಷ್ಟ ಉದ್ದೇಶದಿಂದ ಈ ವಿಶ್ವ ಮತ್ತು ಕಾಲದ ಆದಿಗೆ ಚಾಲನೆ ಕೊಟ್ಟಿತೆ ಅಥವಾ ಯಾರ ಪ್ರೇರಣೆಯೂ ಇಲ್ಲದೆ, ಉದ್ದೇಶವೂ ಇಲ್ಲದೇ ಈ ವಿಶ್ವ ಸೃಷ್ಟಿಯಾಯಿತೆ? ಒಂದಂತೂ ನಿಜ....Law of Thermodynamics ಪ್ರಕಾರ ಯಾವ ಒಂದು ವಸ್ತುವಿನ ಸೃಷ್ಟಿಗೆ ಕಾರಣವಿರಲೇಬೇಕು. ಕಾರಣವಿಲ್ಲದೆ ಅಸ್ಥಿತ್ವವಿಲ್ಲ.(Cause and Effect).

ನೂರಾರು ವರ್ಷಗಳ ಹಿಂದೆ ನೋಡಿದಾಗ ವಿಜ್ಞಾನದಲ್ಲಿ ಅಷ್ಟೇನೂ ಪ್ರಗತಿ ಆಗಿರದ ಕಾಲದಲ್ಲಿ ,ಸಾಮಾನ್ಯವಾಗಿ ಮನುಷ್ಯನು ತನ್ನ ಧರ್ಮಗುಂಪಿನ ಅನುಗುಣವಾಗಿ,ಧರ್ಮಗ್ರಂಥ,ಪುರಾಣಗಳ ಆಧಾರವಾಗಿ ಈ ಜಗತ್ತಿನ ಸೃಷ್ಟಿಯ ಶಕ್ತಿ , ಭಗವಂತ –ದೇವರು ಎಂಬ ನಂಬಿಕೆಯನ್ನು ಇಟ್ಟುಕೊಂಡು, ಅ ನಂಬಿಕೆಗೆ ಬದ್ಧವಾಗಿ ನಡೆದುಕೊಂದು ಬಂದಿದ್ದಾನೆ. ಇದರ ಜೊತೆಗೆ, ಈ ಸೃಷ್ಟಿಯ ಕರ್ತ ದೇವರಲ್ಲ, ಅದೊಂದು ಬೇರೆಯೇ ಶಕ್ತಿ ಎನ್ನುವ ಇನ್ನೊಂದು ಗುಂಪು. ಈ ಗುಂಪಿಗೆ ಯಾವ ಆಧಾರವೂ ಇಲ್ಲದ ಇನ್ನೊಂದು ತರಹದ ನಂಬಿಕೆ. ಎಲ್ಲವೂ ನಂಬಿಕೆಗಳೆ!!! ಕಾಲಕ್ರಮೇಣ ೨೦ನೇ ಶತಮಾನದಲ್ಲಿ ಭೌತವಿಜ್ಞಾನ ಬಹಳ ಮಹತ್ತರವಾದ ಸಂಶೋಧನೆಗಳಿಗೆ ತೆರವು ಮಾಡಿಕೊಟ್ಟಾಗ ನಮ್ಮ ವಿಶ್ವದ ಬಗೆಗಿನ ಎಂದೂ ಕಾಣರಿಯದ ವಿಷಯಗಳು ಹೊರಹೊಮ್ಮಲು ಕಾರಣವಾದವು. ಇವುಗಳು ನಮ್ಮ ವಿಜ್ಞಾನಿಗಳಿಗೆ ಸೃಷ್ಟಿಯ ಅಸ್ಥಿತ್ವ, ಸೃಷ್ಟಿಕರ್ತನ ಹುಡುಕಾಟದ ಮೊದಲ ಹೆಜ್ಜೆಗಳಾದವು.
ಆ ಮಾಹಿತಿ ಬಗ್ಗೆ ತಿಳಿದಾಗ, ನಾವಿರುವ ಈ ಆಕಾಶ ಗಂಗೆ ತಾರಾಪುಂಜ(Milkyway Galaxy)ವೊಂದೇ ಈ ವಿಶ್ವವಲ್ಲ!! ಇದೇ ತರಹವಾದ ಅನಂತಾನಂತ ತಾರಾಪುಂಜಗಳಿವೆ, ಹಾಗೆಯೇ ಆ ತಾರಾಪುಂಜಗಳು ನಮ್ಮ ಆಕಾಶ ಗಂಗೆ ತಾರಾಪುಂಜದಿಂದ ಅತಿ ಹೆಚ್ಚು ಹೆಚ್ಚು ವೇಗದಲ್ಲಿ ದೂರ ಸರಿಯುತ್ತಿರುವ ವಿಚಾರ ಎಲ್ಲಾ ವಿಜ್ಞಾನಿಗಳಿಗೂ ವಿಸ್ಮಯಗೊಳಿಸಿತು, ಜೊತೆಗೆ ಗಂಟೆಗೆ ಎಷ್ಟು ದೂರ ಸರಿಯುತ್ತಿದೆ ಎಂಬ ಮಾಹಿತಿಯನ್ನು ಕಲೆಹಾಕಿ, ಅದನ್ನು ಕಾಲಕ್ಕೆ ಹಿಮ್ಮುಖವಾಗಿ ಲೆಕ್ಕಾಚಾರ ಹಾಕಿ ಮಂಡಿಸಿದಾಗ, ಒಂದಾನೊಂದು ಕಾಲದಲ್ಲಿ ಒಂದೇ ವಸ್ತುವಾಗಿದ್ದ ಈ ತಾರಾಪುಂಜಗಳು ಯಾವುದೋ ಘಟನೆಯ ನಂತರ ಒಂದಕ್ಕೊಂದು ದೂರವಾಗಿ ಅತಿವೇಗದಲ್ಲಿ ಚಲಿಸುತ್ತಿದೆಯೆಂದು. ಹಾಗೆ ಲೆಕ್ಕಾಚಾರ ಹಾಕಿದ ವೈಜ್ಞಾನಿಕ ರೀತಿಯ ಸಂಶೋಧನೆ, ಮಾಹಿತಿಯ ಪ್ರಕಾರ ಸರಿ ಸುಮಾರು ೧೫ ಬಿಲಿಯನ್ ವರ್ಷಗಳ ಹಿಂದೆ ಆ ಒಂದು ವಸ್ತು ಮಹಾನ್ ಸ್ಫೋಟ(Bing Bang) ಗೊಂಡು ನಾವಿರುವ ಈ ವಾಸ್ತವ ಜಗತ್ತಿಗೆ ಆದಿಯಾಯಿತು ಎನ್ನುವ ಒಂದು ಸಿದ್ಧಾಂತ.

ಈ ಮಹಾನ್ ಸ್ಫೋಟ(Big Bang)ವೆಂಬುದು ಭೌತವಿಜ್ಞಾನದ ಒಂದು ಸಿದ್ಧಾಂತ. ವೇದಗಳಲ್ಲಿ ಒಂದಾದ ಋಗ್ವೇದದಲ್ಲಿ ಮಹಾನ್ ಸ್ಫೋಟ(Big Bang)ದ ವಿಚಾರವನ್ನು ಬಹಳ ಚೆನ್ನಾಗಿ ವಿಶ್ಲೇಷಿಸಲಾಗಿದೆ.

**ಪುಟ ೧೩ಕ್ಕೆ.....**

## ಕವನ

**ಹನಿಗವನ**

-----------

ಭಾರತ ದೇಶ ರುಕ್ಮಿಣಿಯ ಹಾಗೆ
ಪಾಕಿಸ್ತಾನ ಸತ್ಯಭಾಮ
ಇಬ್ಬರನ್ನೂ ಒಲೈಸುವ
ಕೃಷ್ಣ
ಅಮೇರಿಕಾದ ಒಬಾಮ!

**- ಎಚ್. ಡುಂಡಿರಾಜ್**

**ಓ ಕನಕಾಂಬರ . . . .ನೀನೆಷ್ಟು ಸುಂದರ !!**



ನೀರೆರುವದ ಮರೆತೆವು ಓ ಕನಕಾಂಬರ
ಮರೆಯಲಿಲ್ಲ ನೀನು ಮಾತ್ರ ಪುಷ್ಪಾಂಕುರ
ನೀರಿಲ್ಲದೆ ಬಾಡಿತೊಂದು ಟೊಂಗೆ ನಿನ್ನದು
ಬಾಡಿದೆಲೆಗಳ ಕಂಡು ಕಣ್ಣು ತೇವ ನನ್ನದು

ಕಣ್ಣ ನೀರು ತುಂಬಿಕೊಂಡು ಎರೆದೆನು ನೀರ
ದಾಹ ನೀಗಿತೆಂದು ಅರಿತು ಇಳಿಯಿತು ಭಾರ
ಹೂವ ನೀಡಿ ಮುಗಿಸಿದೆ ನಿನ್ನಯ ಕಾರ್ಯ
ನೀರೆರೆಯದೆ ನಮ್ಮಿಂದಾಯ್ತು ಕೆಲಸದ ಚೌರ್ಯ

ಕೊಂಡ ಹೂವು ಮುಗಿದಿತ್ತು ನಿತ್ಯ ಪೂಜೆಗೆ
ನೀನು ಕೊಟ್ಟ ಹೂವೇರಿತು ದೇವರ ಮುಡಿಗೆ
ನಮ್ಮ ಕಾರ್ಯ ಮರೆತುದಕೆ ನಿನಗಿಲ್ಲ ಕೋಪ
ಟೊಂಗೆ ಕಳೆದುಕೊಂಡರೂ ನೀ ನೀಡಿದೆ ಪುಷ್ಪ

ಕಾರ್ಯ ಮಾತ್ರ ನಿನ್ನ ಹಕ್ಕು ಎಂದಿತು "ಗೀತ"
ನಡೆಸುತಿರುವೆ ಅದನು ನೀನು ನಕ್ಕು ನಲಿಯುತ
ಪ್ರತಿಫಲದ ಆಸೆ ಆಕಾಂಕ್ಷೆ ನಿನಗಿಲ್ಲ ಖಂಡಿತ
ಕರುಣಿಸು ಭಗವಂತ ನಮಗೀ ಗುಣವ ಅವಿರತ

ನಾಲ್ಕು ದಿನದ ಬಾಳಿನಲ್ಲಿ ಏಕೆಬೇಕು ಸಮರ
ವಿಶ್ವ ಪ್ರೀತಿಯ ಪ್ರತೀಕ ಆ ನೀಲಾಂಬರ
ತಾಳ್ಮೆ ಸಹನೆಯ ಮೂರ್ತಿ ನೀ ಕನಕಾಂಬರ
"ಸಂತೃಪ್ತಿ" ಯಲಿ ನಿನ್ನ ಕೀರ್ತಿ ಅಜರಾಮರ

**- ವಿ. ಪ್ರಸನ್ನ ಕುಮಾರ್**

(ರೇಖಾಚಿತ್ರ: ಸರಿತಾ ನವಲಿ)


Copyright © KCO – Brindavana

ಸಂಚಿಕೆ
೧೧
ನವೆಂಬರ್, ೨೦೧೫



ಸಾಹಿತ್ಯ ವಾಣಿ

# ಕನ್ನಡ ಬಳಗದ ಸಾಹಿತ್ಯಾಭಿರುಚಿ.....



## ನಾ ಕಂಡಂತೆ

-ಸರಿತಾ ನವಲಿ

**ಕಾ**ಲೇಜಿನ ದಿನಗಳವು.ನನ್ನ ಪದವಿ ತರಗತಿಯ ಪಠ್ಯಕ್ರಮದಲ್ಲಿ, ಸಸ್ಯಶಾಸ್ತ್ರ ಒಂದು ವಿಷಯವಾಗಿತ್ತು. ವಿದ್ಯಾರ್ಥಿಗಳು ಪ್ರಯೋಗ ತರಗತಿಯಲ್ಲಿ, ಬಗೆ ಬಗೆಯ ಸಸ್ಯಗಳ,ಸೂಕ್ಷ್ಮವಾದ ತಳಿರುಗಳನ್ನು,ಮೊಗ್ಗುಗಳನ್ನು ಪರೀಕ್ಷಿಸಿ,ಗುಣಧರ್ಮಗಳನ್ನು ವಿವರಿಸಿ, ಮೂಲ ಸಸ್ಯದ ವೈಜ್ಞಾನಿಕ ಹೆಸರನ್ನು ಕಂಡು ಹಿಡಿಯುವುದು ಒಂದು ಕಲಿಕಾ ಪದ್ಧತಿ.

ನಮ್ಮ ಅಧ್ಯಾಪಕರು ಹತ್ತಿರದ ಕಾಡುಗಳಿಂದ ಸಸ್ಯಗಳ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ಉಪಯೋಗಿಸುತ್ತಿದ್ದರು.ಕೆಲವೊಮ್ಮೆ ನಮ್ಮ ಅಕ್ಕಪಕ್ಕದ ಪರಿಸರದ ಸಸ್ಯಗಳನ್ನೇ ಕೊಟ್ಟು,ನಮ್ಮ ಜಾಣ್ಮೆಯನ್ನು ಪರೀಕ್ಷಿಸಿ ನೋಡುವುದಿತ್ತು. ಹೀಗೆ ಒಂದು ದಿನ ಪ್ರಯೋಗಾಲಯದಲ್ಲಿ ಕೊಟ್ಟ ಸಸ್ಯದ ಮಾದರಿಯನ್ನು ನಾವೆಲ್ಲ ಪರೀಕ್ಷಿಸಿ, ಗುಣಧರ್ಮಗಳನ್ನು ಬರೆದು, ಮಾದರಿಯನ್ನು ಗುರುತಿಸಿ, ವೈಜ್ಞಾನಿಕ ಹೆಸರನ್ನು ಪತ್ತೆಹಚ್ಚುವುದು ನಮ್ಮಿಂದಾಗಲಿಲ್ಲ.ನಮ್ಮ ಪುಸ್ತಕದ ಜ್ಞಾನವನ್ನೆಲ್ಲ ಸುರಿದರೂ,ಆ ಸಸ್ಯವನ್ನು ಗುರುತಿಸಲಾಗಲಿಲ್ಲ.ಅಧ್ಯಾಪಕರ ಸಹಾಯ ಕೇಳಿದಾಗ, "ಅಷ್ಟೂ ಗೊತ್ತಾಗಲಿಲ್ಲವೇನ್ರೀ, ಅದರ ಹೆಸರು Spondias mombin. ಅಂದರೆ 'ಅಮಟೆಕಾಯಿ' ಗಿಡ" ಎಂದು ನಕ್ಕರು.ಮುಖ ಸಪ್ಪಗೆ ಮಾಡಿಕೊಂಡು, ತರಗತಿಯ ನಂತರ ಸಸ್ಯದ ಮಾದರಿಯನ್ನು ಕೈಯಲ್ಲಿ ಹಿಡಿದು (ನಮ್ಮ ಸಂಗ್ರಹಣೆಗೆ ಸೇರಿಸಲು) , ಗೆಳತಿಯ ಮನೆಯತ್ತ ನಡೆದೆವು.

ಬಾಗಿಲಲ್ಲೆ ನಮ್ಮನ್ನು ಸ್ವಾಗತಿಸಿದ ಗೆಳತಿಯ ತಾಯಿ, ನಮ್ಮ ಕೈಲಿದ್ದ ಸಸ್ಯದ ತುಂಡನ್ನು ನೋಡಿ, "ಏನು ಇವತ್ತು ಕ್ಲಾಸಿನಲ್ಲಿ 'ಅಮಟೆಕಾಯಿ' ಗಿಡ ಕೊಟ್ಟಿದ್ದಾರೆ" ಎಂದಾಗ ಮತ್ತೊಮ್ಮೆ ಪೆಚ್ಚಾದೆವು.ನಮ್ಮ ಪುಸ್ತಕಜ್ಞಾನದ ಮುಂದೆ ಗೃಹಿಣಿಯ ಅನುಭವದ ಜ್ಞಾನ ಮೇಲುಗೈ ಸಾಧಿಸಿತ್ತು!

ಇದಾಗಿ ಎಷ್ಟೋ ವರುಷಗಳ ನಂತರ , 'ಮಂಕುತಿಮ್ಮನ ಕಗ್ಗ' ಓದಿ, ಪದ್ಯಗಳ ಸಾರವನ್ನು ಮನನ ಮಾಡಿಕೊಳ್ಳುವ ಪ್ರಯತ್ನದಲ್ಲಿ ನನಗೆ ಕಂಡಿದ್ದು ಈ ಕಗ್ಗದ ಸಾಲುಗಳು.

> ಅನುಭವದ ಪಾಲೊಳು ವಿಚಾರ ಮಂಥನವಾಗೆ |
> ಜನಿಯಿಕುಂ ಜ್ಞಾನನವನೀತವದೆ ಸುಖದಂ ||
> ಗಿಣಿಯೋದು ಪುಸ್ತಕಜ್ಞಾನ ; ನಿನ್ನನುಭವವೆ |
> ನಿನಗೆ ಧರುಮದ ದೀಪ – ಮಂಕುತಿಮ್ಮ || (೫೪೪)

ಅನುಭವವೆಂಬ ಹಾಲಿನಲ್ಲಿ,ವಸ್ತು ವಿಚಾರಗಳನ್ನು ಕಡೆದಾಗ , ಜ್ಞಾನವೆಂಬ ಬೆಣ್ಣೆ ತೇಲಿಬರುತ್ತದೆ. ಪುಸ್ತಕದಜ್ಞಾನವೆನ್ನುವುದು ಬರೀ ಗಿಳಿಪಾಠ,ಜೀವನಾನುಭವವೇ ದಾರಿ ತೋರುವ ದೀಪ ಎಂದು ಹೇಳಿರುವ ತಿಮ್ಮಗುರುವಿಗೆ ನನ್ನ ನಮನ.

## ಲೇಖನ

### ರೀ...ಬೊಂಬೆ ಇಟ್ಟಿದೀರ???? – ಉಷಾ ಪ್ರಸನ್ನಕುಮಾರ್

**ರೀ...** ಬೊಂಬೆ ಇಟ್ಟಿದೀರ???? ಪ್ರತಿ ನವರಾತ್ರಿ ಹಬ್ಬದ ಸಮಯದಲ್ಲಿ ನನಗೆ ನನ್ನ ಬಾಲ್ಯದ ನೆನಪು ಬರುವುದು. ನನ್ನ ಸ್ನೇಹಿತರ ಜೊತೆ ಅಕ್ಕಪಕ್ಕದ ಬೀದಿಯಲ್ಲಿ ಮನೆಮನೆಗೂ ಹೋಗಿ ಅವರ ಮನೆಯಲ್ಲಿ ಇಟ್ಟ ಬೊಂಬೆಗಳನ್ನು ನೋಡಿ...ತುಂಬ ಚೆನ್ನಾಗಿ ಇಟ್ಟಿದೀರಾ ಅಂತ ಬಹಳ ತಿಳಿದವರ ಹಾಗೆ ಹೇಳಿ ಅವರು ಕೊಡುವ ಚರಪು (ತಿನಿಸು)...ಪುಟ್ಟ ಪುಟ್ಟ ಕೋಡುಬಳೆ, ಚಕ್ಕುಲಿ, ಸಿಹಿ ತಿನಿಸು ಪಡೆದು ನಾಳೆ ಮತ್ತೆ ಬರುವುದಾಗಿ ಹಾಗು ಸ್ನೇಹಿತರನ್ನು ಕರೆದುಕೊಂಡು ಬರುವುದಾಗಿ ಆಶ್ವಾಸನೆ ಕೊಟ್ಟು, ಪಡೆದ ತಿಂಡಿಯನ್ನು ಮನೆಗೆ ತಂದು ಯಾರಿಗೂ ಕೊಡದೆ ಒಬ್ಬಳೇ ತಿಂದು ಮತ್ತೆ ಮಾರನೆಯದಿನ ಯಾರ ಮನೆಗೆ ಹೋಗಬೇಕು ಅನ್ನೋ ಲೆಕ್ಕಾಚಾರ....ಪ್ರತಿ ನವರಾತ್ರಿ ಬಂದಾಗ ಅಯ್ಯೋ ನಾನು ಬೆಂಗಳೂರಿನಲ್ಲಿ ಇರಬಾರದೇ ಅನ್ನಿಸುತಿತ್ತು. ಸುಮಾರು ಈ ೬ ವರುಷದಿಂದ ನಮ್ಮ ನ್ಯೂಜೆರ್ಸಿಯಲ್ಲಿ ನಮ್ಮ ಸ್ನೇಹಿತರು ಬೊಂಬೆ ಇಡುವ ಸಂಭ್ರಮ ನೋಡಿದಾಗ ನಾವು ಎಲ್ಲಿ ಇದ್ದೀವಿ ಅನ್ನೋ ಆಶ್ಚರ್ಯವಾಯಿತು...

ನವರಾತ್ರಿಯ ಮೊದಲನೆಯ ದಿನ ಪಟ್ಟದ ಬೊಂಬೆಯನ್ನು ಇಟ್ಟು ಅದರ ಮುಂದೆ ಕಲಶವನಿಟ್ಟು ನಮಗೆ ಸಂತಸ ಕೊಡುವ ಬೊಂಬೆಗಳನ್ನು ೩, ೫, ೭, ೯ ಅಥವ ೧೧ ಮೆಟ್ಟಿಲುಗಳನ್ನು ಇಟ್ಟು ಅದರ ಮೇಲೆ ಪೀತಾಂಬರ ಹೊದೆಸಿ ಬೊಂಬೆಗಳನ್ನು ಜೋಡಿಸಿ ದೀಪವನಿಟ್ಟು, ಸ್ನೇಹಿತರನ್ನು ಕರೆದು ಬೊಂಬೆಗಳನ್ನು ಪ್ರದರ್ಶಿಸಿ, ಮುತ್ತೈದೆಯರನ್ನು ಕರೆದು ಅರಿಸಿನ ಕುಂಕುಮ ಕೊಟ್ಟು ಸಂಭ್ರಮ ಪಡುವುದು ವಾಡಿಕೆ. ಒಂದೊಂದು ದಿವಸ ಒಂದೊಂದು ದೇವಿಗೆ ಪೂಜೆ, ಸರಸ್ವತಿಯ ಪೂಜೆಯ ದಿನದಂದು ಮಕ್ಕಳ ಶಾಲೆಯ ಪುಸ್ತಕ ಇಡುವುದು .ಆ ದೇವಿಯನ್ನು ವಿದ್ಯೆ ಬುದ್ಧಿಯನ್ನು ಕೊಟ್ಟು ಕಾಪಾಡು ಅಂತ ಬೇಡಿಕೊಳುವುದು. ಬೇಡಿಕೊಳುವುದು, ದುರ್ಗಾಷ್ಟಮಿಯಂದು ದುರ್ಗೆಯನ್ನು ಪೂಜಿಸಿ ಧೈರ್ಯ ಕೊಡು ಎಂದು ಬೇಡುವುದು.. ಮಹಾನವಮಿಯ ದಿನದಂದು ಎಲ್ಲ ಆಯುಧಗಳನ್ನು ಪೂಜಿಸುವುದು.. ಚಾಮುಂಡಿ ಮಹಿಷಾಸುರನನ್ನು ಸಂಹರಿಸುವ ಮೊದಲು ಆಯುಧಗಳನ್ನು ಪೂಜಿಸಿ ನಂತರ ಸಂಹರಿಸಿರುವಳು ಅನ್ನೋ ನಂಬಿಕೆ. ಮಾರನೆಯ ದಿನ ಆ ತಾಯಿ ವಿಜಯ ಸಾಧಿಸಿದ ಸಲುವಾಗಿ ವಿಜಯದಶಮಿ ಆಚರಿಸುವೆವು..ದುಷ್ಟ ಶಿಕ್ಷಣ ಶಿಷ್ಟ ರಕ್ಷಣ!!!



ನಮಗಂತೂ ನವರಾತ್ರಿ ಬಂತು ಅಂದರೆ ಸಾಕು ಪ್ರತಿ ದಿನ ಒಬ್ಬೊಬ್ಬರ ಮನೆಗೆ ಬೊಂಬೆ ನೋಡಲು ಹೋಗುವುದು, ಲಲಿತಾ-ಸಹಸ್ರನಾಮ ಪಠಿಸುವುದು, ರುಚಿಯಾದ ಊಟ ಮಾಡುವುದು...ಈ ಒಂಬತ್ತು ದಿವಸ ಬೊಂಬೆ ನೋಡಲು ಹೋಗುವಾಗ ಅವರು ಈ ಸಲ ಏನು ಇಟ್ಟಿರಬಹುದು ಅನ್ನೋ ಕುತೂಹಲ..ಮೈಸೂರಿನ ಜಂಬು ಸವಾರಿಯಾಗಿರಬಹುದು, ಹಳ್ಳಿಯ ಗುಡಿಸಲು, ಹೊಲ, ಹಸು, ಭಾವಿ, ನೀರು ಸೇದುವ ಮಹಿಳೆಯರು, ಕುಟ್ಟುವ-ಬೀಸುವ ಮಹಿಳೆಯರು, ಶೆಟ್ಟರ ಅಂಗಡಿ.... ಒಂದು ಕಡೆಯಾದರೆ, ಅಷ್ಟಲಕ್ಷ್ಮಿಯ ವಿಗ್ರಹಗಳು, ದೇವಸ್ಥಾನ, ಚೆನ್ನಪಟ್ಟಣದ ಬೊಂಬೆಗಳು, ರಾಮಾಯಣ, ದಶಾವತಾರ, ಮಹಾಭಾರತ, ಮಹಿಷಾಸುರನ ವಧೆ, ಮದುವೆಯ ಮಂಟಪ, ಕತ್ತು ಅಲ್ಲಾಡುವ ಬ್ರಾಹ್ಮಣ-ಮುತ್ತೈದೆ, ಮಕ್ಕಳ ಆಟಸಾಮಾನು ಹೀಗೆ ಹಲವಾರು ಬೊಂಬೆಗಳು ಕಣ್ಣು ತಂಪು ಮಾಡಿರುವುದರಲ್ಲಿ ಸಂದೇಹವಿಲ್ಲ!!



ಬೊಂಬೆ ನೋಡುವ ಸಲುವಾಗಿ ಮೊನ್ನೆ ಒಬ್ಬರ ಮನೆಗೆ ಹೋಗಿದ್ದಾಗ ಅವರ ಮನೆಯಲ್ಲಿ ಅವರ ಅಜ್ಜಿಯ ಮದುವೆಯಲ್ಲಿ ಕೊಟ್ಟ ೧೫೦ ವರುಷದ ಬೊಂಬೆ ಇಟ್ಟಿದ್ದರು... ಆ ಬೊಂಬೆಗೆ ಮೂರು ದಿವಸ ಮದುವೆ ಮಾಡಿದರಂತೆ... ಕೇಳಿ ಆಶ್ಚರ್ಯವಾಯಿತು!! ಇದು ತಲತಲಾಂತರದಿಂದ ಬಂದ ಬೊಂಬೆ!! ಅದನ್ನು ಪಡೆದ ಅವಳೇ ಧನ್ಯ!!!

ಒಟ್ಟಿನಲ್ಲಿ ನಮ್ಮ ಸಂಪ್ರದಾಯವನ್ನು ಬಿಡದೆ ಪಾಲಿಸುವ ಸ್ನೇಹಿತರನ್ನು ನೋಡಿ ಆನಂದವಾಯ್ತು. ರೀ... ಬೊಂಬೆ ಇಟ್ಟಿದೀರಾ ಅನ್ನೋ ಬದಲು ರೀ ಬೊಂಬೆ ಇಟ್ಟಿದೀವಿ ಅಂತ ಕರೆಯೋ ಸ್ನೇಹಿತರು ಇರೋವರೆಗೂ ಎಲ್ಲೆಲ್ಲೂ ಬೊಂಬೆ ಬೊಂಬೆ ಬೊಂಬೆ!!!


Copyright © KCO – Brindavana

ಪುಟಾಣಿ ಪ್ರಪಂಚ

# ಕನ್ನಡ ಬಳಗದ ಚಿಣ್ಣರ ಲೋಕ.....

## ನೀತಿ ಕಥೆ

### ಸಿಂಹ ಮತ್ತು ಇಲಿ



ಒಂದು ದೊಡ್ಡ  ಕಾಡಿನಲ್ಲಿ 'ಕಾಡಿನ ರಾಜ' ಸಿಂಹವೊಂದು ನಿದ್ದೆ ಮಾಡುತ್ತಿತ್ತು, ಹತ್ತಿರದಿಂದ ಒಂದು ಸಣ್ಣ ಇಲಿಯು ಅದನ್ನು ನೋಡುತ್ತಿತ್ತು.ಮೊದಲು ಬಾಲದ ಹತ್ತಿರ ಬಂದ ಇಲಿ, ಸಿಂಹದ ಬಾಲವನ್ನು ಕೆಣಕಿತು. ನಿದ್ರೆಯಲ್ಲಿರುವ ಸಿಂಹಕ್ಕೆ ಅದು ತಿಳಿಯಲಿಲ್ಲ. ಅದನ್ನು ನೋಡಿದ ಇಲಿ ಉತ್ಸಾಹದಿಂದ ಮಲಗಿರುವ ಸಿಂಹವನ್ನು ಹತ್ತಿ  ಅದರ ದೊಡ್ಡ ಕಿವಿ, ಗಲ್ಲದ ಕೇಸರ ನೋಡಿ “ಅಬ್ಬಾ !ಎಷ್ಟೊಂದು ದೊಡ್ಡದಿದೆ ಈ ಸಿಂಹ" ಮನಸ್ಸಿನಲ್ಲಿ ಅಂದು ಕೊಂಡಿತು. ಅದು ಸಂತೋಷದಿಂದ ಸಿಂಹದ ಮೇಲೆ ಕುಣಿಯ ತೊಡಗಿತು. ದೀರ್ಘ ನಿದ್ದೆಯಿಲ್ಲಿದ್ದ ಸಿಂಹಕ್ಕೆ ಎಚ್ಚರವಾಯಿತು. ತನ್ನ ಮೇಲೆ ಕುಣಿಯುತ್ತಿರುವ ಇಲಿಯನ್ನು ನೋಡಿ ಸಿಂಹಕ್ಕೆ ಬಹಳ ಕೋಪ ಬಂದಿತು. ತನ್ನ ನಿದ್ರಾಭಂಗ ಮಾಡಿದ ಇಲಿಗೆ ಪಾಠ ಕಲಿಸುತ್ತೇನೆ ಎಂದು ಅದನ್ನು ತನ್ನ ಕೈಗಳಿಂದ ತಟ್ಟನೆ ಹಿಡಿಯಿತು.ಆ ಸಿಂಹದ ಚೂಪಾದ ಉಗುರುಗಳ ಮಧ್ಯೆ ಸಿಕ್ಕಿ ಹಾಕಿಕೊಂಡ ಇಲಿ ವಿಲವಿಲ ಒದ್ದಾಡಿತು. ಕಣ್ಣಲ್ಲಿ ನೀರು ತುಂಬಿ  "ಸಿಂಹ ರಾಜ, ನನ್ನನ್ನು ಬಿಟ್ಟು ಬಿಡು, ನಾ ನಿನಗೆ ನಿನ್ನ ಕಷ್ಟದ ಸಮಯದಲ್ಲಿ ಸಹಾಯ ಮಾಡುತ್ತೇನೆ " ಎಂದು ಅಳುವಿನಿಂದ ಕೇಳಿತು. ಈ ಪುಟ್ಟ ಇಲಿಯಿಂದ 'ಸಹಾಯದ' ಮಾತುಕೇಳಿ ಸಿಂಹಕ್ಕೆ ನಗು ಬಂದಿತು.ಆದರೂ ಕಣ್ಣೀರು ತುಂಬಿರುವ ಇಲಿಯನ್ನು ಕರುಣೆಯಿಂದ ನೋಡಿ ಸಿಂಹ ಅದನ್ನು ಬಿಟ್ಟು ಬಿಟ್ಟಿತು.

ಹಲವಾರು ದಿನಗಳ ನಂತರ ಒಬ್ಬ ಬೇಟಗಾರನು ಸಿಂಹಕ್ಕಾಗಿ ಒಂದು ಬಲೆಯನ್ನು ಹಾಸಿದನು. ಆಹಾರಕ್ಕಾಗಿ ಬಂದ ಸಿಂಹ, ಆ ಬಲೆಯನ್ನು ನೋಡದೆ ಅದರಲ್ಲಿ ಸಿಕ್ಕಿ ಹಾಕಿಕೊಂಡಿತು. ಅದು ಕೋಪದಿಂದ ಜೋರಾಗಿ ಘರ್ಜನೆ ಮಾಡಿತು. ಅದು ಕಾಡಲ್ಲೆಲ್ಲಾ ಮಾರ್ದನಿಯಾಗಿ ಕೇಳಿಸಿತು. ಅದನ್ನು ಕೇಳಿದ ಇಲಿ ಸಿಂಹವನ್ನು ಹುಡುಕಿಕೊಂಡು ಬಲೆಯ ಹತ್ತಿರ ಬಂದಿತು. ಕೋಪದಲ್ಲಿರುವ ಸಿಂಹದ ಹತ್ತಿರ ಮೆಲ್ಲನೆ ಬಂದು, ಬಲೆಯ ದಾರವನ್ನು ತನ್ನ ಹಲ್ಲಿನಿಂದ ಕಚ್ಚಿ ತುಂಡು ಮಾಡಿತು.ಒಂದೊಂದಾಗಿ ಬಲೆಯ ದಾರದ ಗಂಟುಗಳು ಕಡಿದು ಬಿದ್ದವು.ಸಿಂಹದ ಸಂತೋಷಕ್ಕೆ ಪಾರವೇ ಇರಲಿಲ್ಲ. ಬಲೆಯಿಂದ ಹೊರಬಂದ ಸಿಂಹ , ತನ್ನ ಜೀವ ಉಳಿಸಿದ್ದಕ್ಕಾಗಿ ಇಲಿಗೆ ಧನ್ಯವಾದ ಹೇಳಿತು. ಇನ್ನು ಮುಂದೆ "ನೀ ನನ್ನ ಜೀವ ಉಳಿಸಿದ ಗೆಳಯ" ಎಂದು ಹೇಳಿತು.

**ನೀತಿ : ನಾವು ಯಾರನ್ನೂ ತುಚ್ಛವಾಗಿ ನೋಡಬಾರದು ಮತ್ತು ಸಮಯಕ್ಕೆ ಆದವನೆ ಗೆಳೆಯ**

(ಆಧಾರ: ನೀತಿ ಕಥೆಗಳು)

(ಚಿತ್ರ ಆಧಾರ:ಅಂತರ್ಜಾಲ,ಬಣ್ಣ ತುಂಬಿದ್ದು:ಅಪ್ರಮತ್ತ ಭಾರದ್ವಜ)

## ಚಿತ್ತಾರ



ವರ್ಣಚಿತ್ರ : ಅಭಿಜ್ಞ ಭಾರದ್ವಾಜ



ವರ್ಣಚಿತ್ರ : ಸ್ಪಂದನ ರಾವ್

## ನಿಮಗೆಷ್ಟು ಗೊತ್ತು ?

೧. ಕರ್ನಾಟಕ ಉದಯವಾದ ದಿನಾಂಕ ಯಾವುದು?

೨. ಕರ್ನಾಟಕದ ಎಷ್ಟು ಸಾಹಿತಿಗಳಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ?

೩. ಕರ್ನಾಟಕದ ಮೊದಲ ಮುಖ್ಯ ಮಂತ್ರಿಗಳು ಯಾರು?

೪. ಕುವೆಂಪು ಅವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ?

೫. ಕನ್ನಡದ ಮೊಟ್ಟಮೊದಲ ಕೃತಿ ಯಾವುದು? ಅದನ್ನು  ಬರೆದವರಾರು?

೬. ಕನ್ನಡದ ಕೋಗಿಲೆ  ಎಂದು ಯಾರನ್ನು ಕರೆಯುತ್ತಾರೆ?

೭. ಕನ್ನಡದ ಬಾವುಟದಲ್ಲಿರುವ ಹಳದಿ/ಕೆಂಪು  ಏನನ್ನು ಸೂಚಿಸುತ್ತದೆ?

೮. ' ಉದ್ಯಾನ ನಗರಿ' ಎಂದು ಕರೆಯಲ್ಪಡುವ ಕರ್ನಾಟಕದ      ನಗರ ಯಾವುದು?

೯. ಕರ್ನಾಟಕ ಸಂಗೀತದ ಪಿತಾಮಹ ಯಾರು?

೧೦. ದಾದಾ ಫಾಲ್ಕೆ ಪ್ರಶಸ್ತಿ ಪಡೆದ ಕನ್ನಡದ ನಾಯಕ ನಟನಾರು?

**ನಿಬಂಧನೆಗಳು:**

೧.  ೧೬ ವರ್ಷಕ್ಕೆ ಒಳಪಟ್ಟ ಮಕ್ಕಳು ಭಾಗವಹಿಸಬಹುದು
೨. ಉತ್ತರಗಳನ್ನು vani@brindavana.org ಗೆ email ಮುಖಾಂತರ ಕಳಿಸಿ.
೩. ಒಂದಕ್ಕಿಂತ ಹೆಚ್ಚು ಸರಿ ಉತ್ತರಗಳು ಬಂದರೆ ಡ್ರಾ ಮುಖಾಂತರ ವಿಜಯಿಗಳನ್ನು ಆರಿಸಲಾಗುವುದು.
೪. ಎಲ್ಲಾ ಉತ್ತರಗಳು "ಬೃಂದಾವನ ವಾಣಿ" ಯ ಸ್ವತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ


Copyright © KCO – Brindavana

## ಕನ್ನಡ ಬಳಗದ ವನಿತೆಯರಿಗಾಗಿ

### ಲೇಖನ

**ಸುಂದರ ಉಗುರುಗಳು - ಲಕ್ಷ್ಮೀ ರಾವ್**



ಹೆಣ್ಣು ಮಕ್ಕಳು ತಮ್ಮ ಉಗುರಿನ ಸೌಂದರ್ಯ ಹೆಚ್ಚಿಸಲು ಬಣ್ಣಗಳನ್ನು ಹಚ್ಚಿಕೊಳ್ಳುವುದು ೬ ನೆ ಶತಮಾನದಿಂದಲೂ
ವಾಡಿಕೆಯಲ್ಲಿತ್ತು. ಈಜಿಪ್ತ ದೇಶದಲ್ಲಿ ಗೋರಂಟಿಯನ್ನು ಬಳಸುತ್ತಿದ್ದರು.
ಮ್ಯನಿಕ್ಯುರ್ -ಕೈಯ ಉಗುರುಗಳ ಆರೈಕೆ ; ಪೆಡಿಕ್ಯುರ್ -ಕಾಲಿನ ಉಗುರುಗಳ ಆರೈಕೆ.



ಉಗುರಿನ ತುದಿಯನ್ನು ಗುಂಡಾಗಿ,ಚೌಕಟ್ಟಾಗಿ ಫಿಲೈರ್ ನಿಂದ ಉಜ್ಜಬಹುದು. ಉಗುರಿನ ಸೌಂದರ್ಯ ಹಾಗು ಆರೋಗ್ಯ ಹೆಚ್ಚಿಸಲು ,ಬೆಚ್ಚನೆಯ ನೀರಿನಲ್ಲಿ ಕೈ ಮತ್ತು ಕಾಲುಗಳನ್ನು ಸ್ವಲ್ಪ ಹೊತ್ತು ಇಟ್ಟು ,ಸಾಬೂನು ಬಳಸಿ ತೊಳೆಯುವುದು.ವ್ಯಾಸಲೀನ್ ಅಥವ ಕ್ರೀಮ್ ನಿಂದ ಮಾಲೀಶು ಮಾಡುವುದು.
ಉಗುರಿನ ಕಲೆ ಅವರವರ ಕಲ್ಪನೆಗೆ ಬಿಟ್ಟಿದ್ದು. ಯಾವ ಬಣ್ಣ ಒಪ್ಪುವುದೊ ಅಥವ ಇಷ್ಟವಾಗುವುದೊ ಅವುಗಳನ್ನು ಬಳಸಿ,ಸಣ್ಣ ಚಿತ್ರಗಳನ್ನು ಉಗುರಿನ ಮೇಲೆ ಬಿಡಿಸಬಹುದು.
ಪ್ರಸಿದ್ಧವಾದ ಮ್ಯನಿಕ್ಯುರ್ - ಫ್ರೆಂಚ್ ಮ್ಯನಿಕ್ಯುರ್ .
ವಿಧಾನ : ತಿಳಿ ಗುಲಾಬಿ ಬಣ್ಣ ಹಚ್ಚಿ, ತುದಿ ಉಗುರಿಗೆ ಮಾತ್ರ ಚಿಕ್ಕ ಬಿಳಿ ಬಣ್ಣದ ಗೆರೆ ಹಚ್ಚುವುದು.
ಉಗುರು ಕಲೆ (ನೈಲ್ ಆರ್ಟ್) ಬರೀ ಬಣ್ಣ ಹಾಕುವುದೊಂದೇ ಅಲ್ಲ. ಮಿಣುಕುವ ನೆಕ್ಕಿ, ನೈಲ್ ಟೇಪ್ , ಹೀಗೆ ವಿಧ,ವಿಧವಾದ ವಸ್ತುಗಳನ್ನು ಕಲಾತ್ಮಕವಾಗಿ ಬಳಸಬಹುದು.
ಚಿತ್ರದಲ್ಲಿ , ಬೆಳ್ಳಿ ಬಣ್ಣದ ಫ್ರೆಂಚ್ ಮ್ಯನಿಕ್ಯುರ್ ಮೇಲೆ, ಕಪ್ಪು ಬಣ್ಣದ ಹೂವಿನ ಬಿಡಿಸಿ, ಕಪ್ಪು ಬಣ್ಣದ ನೆಕ್ಕಿಯನ್ನು ಬಳಸಲಾಗಿದೆ.

### ಸುಂದರ ಸಂಪ್ರದಾಯ



ವರ್ಣಚಿತ್ರ ಕೃಪೆ: ದೀಪ್ತಿ ಗಡ್

### ಮನೆ ಮದ್ದು

ಚಿಕ್ಕ ಮಕ್ಕಳಲ್ಲಿ ಚಳಿಗಾಲದಲ್ಲಿ ಕಂಡುಬರುವ ಕೆಮ್ಮಿಗೆ ತುಳಸಿ ಗಿಡದ ೨೫-೩೦ಎಲೆಗಳನ್ನು(೧ ಚಮಚೆ ರಸವಾಗುವಷ್ಟು) ಅರೆದು ರಸತೆಗೆದು,ಅದಕ್ಕೆ ೧ ಚಮಚೆ ಜೇನುತುಪ್ಪ ಬೆರೆಸಿ ಸೇವಿಸಿಬೇಕು.ದಿನಕ್ಕೆ ಎರಡು ಬಾರಿ ಕೊಡಬಹುದು.

### ಸವಿರುಚಿ

**ಸೇಬು ಹಲ್ವ - ಸೌಮ್ಯ ಶೇಖರ್**

**ಬೇಕಾಗುವ ಪದಾರ್ಥಗಳು :**

2 ದೊಡ್ಡ ಸೇಬು, [ಸುಮಾರು 1.5 ಕಪ್ ತುರಿದ ಸೇಬು]
1.5 ಟೇಬಲ್ ಸ್ಪೂನ್ ತುಪ್ಪ (ಶೋಧಿಸಿದ ಬೆಣ್ಣೆ)
1 ಕಪ್ ಬೆಲ್ಲ
1 ಕಪ್ ಹಾಲು
1 ಕಪ್ ಚಿರೋಟಿ ರವಾ (ಹುರಿದ)
ಟೀಚಮಚ ಏಲಕ್ಕಿಪುಡಿ
ಟೀಚಮಚ ಜಾಯಿಕಾಯಿ ಪುಡಿ
ಹಲ್ಲೆ ಬಾದಾಮಿ, ಅಲಂಕರಿಸಲು

**ವಿಧಾನ:**



ಸೇಬುಗಳನ್ನು ತೊಳೆದು ಸಿಪ್ಪೆ ತೆಗೆಯಿರಿ.
ಹೋಳುಗಳಾಗಿ ಕತ್ತರಿಸಿ ಕುದಿಯುವ ನೀರಿನಲ್ಲಿ 7-8 ನಿಮಿಷ ಬಿಡಿ,
ನಂತರ ನೀರು ತೆಗೆದು ಮ್ಯಾಶ್ ಮಾಡಿ.
ಮಧ್ಯಮ ಶಾಖದಲ್ಲಿ ಪ್ಯಾನ್ ಮೇಲೆ ತುಪ್ಪವಿಡಿ. ಒಮ್ಮೆ ಬಿಸಿ ಯಾದ ನಂತರ ಸೇಬು ಮಿಕ್ಸ್ಚರ್ ಸೇರಿಸಿ.
ಈಗ ಬೆಲ್ಲ ಸೇರಿಸಿ ಮತ್ತು ಹುರಿದ ರವೆ ಮತ್ತು ಹಾಲು ಸೇರಿಸಿ,
ತೇವಾಂಶ ಆವಿಯಾಗುವ ತನಕ ಮಿಶ್ರಣ ವನ್ನು ಸುಮಾರು 15 -20 ನಿಮಿಷ ಮಿಕ್ಸ್ ಮಾಡಿ. ನಂತರ ಏಲಕ್ಕಿ ಮತ್ತು ಜಾಯಿಕಾಯಿ ಪುಡಿ ಸೇರಿಸಿ. ಹಲ್ಲೆ ಬಾದಾಮಿ ಅಲಂಕರಿಸಿ ಬಿಸಿ ಬಿಸಿಯಾಗಿ ಸೇವಿಸಿ.


Copyright © KCO – Brindavana

ಸಂಚಿಕೆ
೦೧
ನವೆಂಬರ್, ೨೦೧೪

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




# ಕನ್ನಡ ಬಳಗದ ವನಿತೆಯರಿಗಾಗಿ......

## ಲೇಖನ

### ಬಾಲ್ಯದಲ್ಲಿ ಕಂಡ ಕನಸೊಂದು ನನಸಾದಾಗ - ಶ್ರೀಪರ್ಣಿಕಾ ಕಂಚಿ



**ಬಾ**ಲ್ಯದಿಂದ ನಾನು ಶ್ರೀಮತಿ ರತ್ನಮಾಲ ಪ್ರಕಾಶರ ಗಾಯನವನ್ನು ರೇಡಿಯೋ, ದೂರದರ್ಶನ , ನಂತರ ಅಂತರ್ಜಾಲದಲ್ಲಿ ಸದಾ ಕೇಳುತ್ತಾ ಬೆಳೆದಿದ್ದೇನೆ. ಅವರು ಹಾಡುವ ಶೈಲಿ,ಭಾವ ಮತ್ತು ಅವರ ಮಧುರವಾದ ಕಂಠ , ನನ್ನನ್ನು ಯಾವಾಗಲೂ ಮೋಹಗೊಳಿಸಿದೆ.

ಅವರಿಂದ ಹಾಡು ಕಲಿತು ಅವರ ಜೊತೆ ಹಾಡಲು ಕನಸು ಕಂಡಿದ್ದೆ. ಬೃಂದಾವನ ಗಣೇಶ ಹಬ್ಬದಲ್ಲಿ ಮತ್ತು ಕಾರ್ಯಾಗಾರದಲ್ಲಿ ಆ ಕನಸು ನನಸಾಗುತ್ತದೆ ಎಂದು ತಿಳಿದು ನನಗೆ ಬಹಳ ಸಂತೋಷವಾಯಿತು. ಆದರೆ ಅಂತಹ ದೊಡ್ಡ ಗಾಯಕಿಯ ಜೊತೆ ಹೇಗೆ ಹಾಡುವುದು ಎಂಬ ಸಂಕೋಚವಿತ್ತು.ಆದರೆ ಅವರನ್ನು ಭೇಟಿ ಮಾಡಿದಾಗ ಕಂಡಿದ್ದು ಅವರ ಸರಳತೆ. ಅವರ ಗಾಯನದಂತೆ ಮಧುರವಾದ ಅವರ ವ್ಯಕ್ತಿತ್ವ. ನಮ್ಮೆಲ್ಲರ ಉತ್ಸುಕತೆಯನ್ನು ಗಮನಿಸಿ ಕಾರ್ಯಾಗಾರ ಮಾಡಲು ಒಪ್ಪಿದಾಗ ನಮ್ಮೆಲ್ಲರಿಗೆ ಆದ ಆನಂದ ಹೇಳಲು ಅಸಾಧ್ಯ. ಅವರು ನಡೆಸಿದ ಕಾರ್ಯಾಗಾರ ನನ್ನ ಜೀವನದ ಒಂದು ಸುಂದರ ಅನುಭವ !!



ನಮಗೆ ಬೇಕಾದ ಹಾಡುಗಳನ್ನು ಕಲಿಸಿ ಕೊಟ್ಟು ನಾವು ಅದನ್ನು ಸರಿಯಾಗಿ ಹಾಡುವವರೆಗೂ ಅಭ್ಯಾಸ ಮಾಡಿಸಿ ತಪ್ಪಾದಾಗ ತಿದ್ದಿ, 'ಮತ್ತೆ ಪ್ರಯತ್ನಮಾಡಿ' ಎಂದು ಹೇಳುತ್ತಾ ಪ್ರೋತ್ಸಾಹಿಸಿ ನಮಗೆ ಸುಪ್ರಸಿದ್ಧ ಹಾಡುಗಳನ್ನು ಹೇಳಿ ಕೊಟ್ಟು ಅದನ್ನು ಕಾರ್ಯಕ್ರಮದಲ್ಲಿ ತುಂಬಾ ಚೆನ್ನಾಗಿ ಹಾಡುವ ಹಾಗೆ ಬೆಂಬಲ ನೀಡಿದರು. ಶ್ರೀಮತಿ ರತ್ನಮಾಲರವರು ಮಕ್ಕಳಿಗೆ ಕಾರ್ಯಾಗಾರ ನಡೆಸಿಕೊಟ್ಟು, ಅವರಿಂದ ಕಾರ್ಯಕ್ರಮದಲ್ಲಿ ಹಾಡಿಸಿ ಮಕ್ಕಳು ಮತ್ತು ಅವರ ತಂದೆ - ತಾಯಿಯರು ಹೆಮ್ಮೆ ಪಡುವಂತೆ ಮಾಡಿದರು.

ಅವರು ಹೇಳಿಕೊಟ್ಟ ಎಲ್ಲಾ ಹಾಡುಗಳನ್ನು ಮತ್ತು ಅನುಭವವನ್ನು ನಾನು ಎಂದೂ ಮರೆಯಲಾರೆ. ಇದನ್ನು ನನ್ನ ಜೊತೆ ಕಾರ್ಯಾಗಾರಕ್ಕೆ ಬಂದ ಎಲ್ಲಾ ಮಿತ್ರರು ಖಂಡಿತವಾಗಿ ಒಪ್ಪುತ್ತಾರೆಯಂಬ ವಿಶ್ವಾಸವಿದೆ. ಮುಂದೆ ಇಂತಹ ಅವಕಾಶ ನಮ್ಮೆಲ್ಲರಿಗೆ ಮತ್ತೆ ಬರಲಿ ಎಂದು ಹಾರೈಸುತ್ತಾ ಶ್ರೀಮತಿ ರತ್ನಮಾಲಾ ಅವರಿಗೆ ನನ್ನ ಹೃತ್ಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ. ಕಾರ್ಯಾಗಾರ ನಡೆಯಲು ಕಾರಣಕರ್ತರಾದ ಮೀರಾ ರಾಜಗೋಪಾಲ ಮತ್ತು ಉಷಾ ಪ್ರಸನ್ನಕುಮಾರ ಅವರಿಗೆ ಧನ್ಯವಾದಗಳು. ನಿಜ....ಬಾಲ್ಯದಲ್ಲಿ ಕಂಡ ಕನಸು ನನಸಾಗಿತ್ತು!!!

### ಸೃಷ್ಟಿಕರ್ತನ ಹುಡುಕುತ್ತಾ ಮುಂದುವರೆದುದು.....

**ನಾಸದೀಯ ಸೂಕ್ತ** ಎಂಬುದು ಋಗ್ವೇದದಲ್ಲಿ ಹತ್ತನೇ ಮಂಡಲದಲ್ಲಿ ೧೨೯ ಸೂಕ್ತದಲ್ಲಿನ ೭ ಋಕ್ಕುಗಳ ಒಂದು ಭಾಗ. ಇದರಲ್ಲಿ ಈ ಸೃಷ್ಟಿಯ ಕುರಿತಾದ ವಿಶ್ಲೇಷಣೆ, ವೈಜ್ಞಾನಿಕವಾಗಿ ಮಹಾನ್ ಸ್ಫೋಟ ಸಿದ್ಧಾಂತದಲ್ಲಿ ಹೇಳುವ ಸೃಷ್ಟಿಯ ಕುರಿತಾದ ಕಾಲಘಟ್ಟಗಳಿಗೆ ಅತ್ಯಂತ ಹತ್ತಿರವಾಗಿದೆ..

೨೧ನೇ ಶತಮಾನದಲ್ಲಿ ಈ ವಿಚಾರವಾಗಿ ಭೌತ ವಿಜ್ಞಾನ, ತಂತ್ರಜ್ಞಾನದಲ್ಲಿ ಬಹಳಷ್ಟು ಬೆಳವಣಿಗೆಗಳಾಗಿದ್ದು , ಮಂಗಳ ಗ್ರಹದ ಅನೇಕ ಮಾಹಿತಿಗಳು ದೊರಕುವಂತಾಗಿದೆ.ನಮ್ಮ ಈ ಸೌರಮಂಡಲದ ಆಚೆಗಿನ ,ಎಣಿಸಲಾರದಷ್ಟು ಸೌರಮಂಡಲಗಳ ಅನೇಕ ಮಾಹಿತಿಗಳು ಲಭ್ಯವಾಗಿವೆ.

ಮುಂದೆ ಬರುವ ನೂರಾರು ವರ್ಷಗಳಲ್ಲಿ ಮಂಗಳನತ್ತ ಮಾನವ ಪ್ರಯಾಣ ಮಾಡುವಂತಾಗಬಹುದು,ಈ ಸೌರಮಂಡಲ ಬಿಟ್ಟು ಇನ್ಯಾವುದೋ ಸೌರಮಂಡಲದತ್ತ ಪ್ರಯಾಣ ಸಾಧ್ಯವಾಗಬಹುದು. ಇಂದಿನ ತಂತ್ರಜ್ಞಾನ ಬಹಳ ಮುಂದುವರೆದಿದ್ದು, ಮುಂದಿನ ಸಾವಿರಾರು ವರ್ಷಗಳಲ್ಲಿ, ಸೃಷ್ಟಿಯ ರಹಸ್ಯವನ್ನು ಭೇದಿಸುವಲ್ಲಿ, ಉತ್ತರ ಹುಡುಕುವಲ್ಲಿ, ಹೆಚ್ಚಿನ ಮಾಹಿತಿಗಳನ್ನು ಪಡೆಯುವಂತಾಗಬಹುದು ಎಂಬುದು ಊಹಿಸಲಾಧ್ಯ.... ಆದರೂ ಅದು ನಿಜ...ಸೃಷ್ಟಿಕರ್ತನ ಹುಡುಕಾಟ, ಈ ಜಗತ್ತು ಇರುವವರೆಗೂ ಸಾಗುತ್ತಲೇ ಇರುತ್ತದೆ. ಉತ್ತರ ಸಿಗಬಹುದೇ?


**ಪ್ರೇರಣೆ:**

Brief History of time By S. Hawking

God and Astronomers by Dr. Robert Jastrow

ಕ್ವಾಂಟಮ್ ಜಗತ್ತು - ಅಗ್ನಿ ಶ್ರೀಧರ್

## ಕ್ಯಾಮೆರಾ ಕಣ್ಣಿಂದ





**ವರ್ಣಚಿತ್ರಗಳು: ಉಷಾ ಬಸ್ರೂರ**

### ಈಶಾನ್ಯದ ಆಶ್ವೀಜ ಮಾಸದಲ್ಲಿ .....



ಬೇಸಿಗೆ ಬಂದು ಅಣುಕಿಸಿ ಓಡಿತು,
ಗಾಳಿಯಲ್ಲಿ ತಂಪು ಮೆಲ್ಲಗೆ ಕೂಡಿತು|
ಗಿಡ ಮರಗಳು ಹಾಸಿದವು ಜರತಾರಿ,
ನಿಸರ್ಗದ ಈ ಸೊಬಗು ಆಹ್ಲಾದಕಾರಿ|
ಗಾಳಿಯ ಚುಂಬನಕೆ ಎಲೆಗಳ ರಂಗೇರಿತೊ?
ಬೀಳೆವೆಂಬುವ ಕೋಪಕೆ ಅವು ಕೆಂಪಾಯಿತೋ?
ಆಡಿದಂತಿದೆ ಕಾಡು ಮೇಡು ಕಾಮಣ್ಣ ಹಬ್ಬ,
ಮರೆತಂತಿದೆ ಇತರ ಬಣ್ಣಗಳ ಕಾಮನ ಬಿಲ್ಲು|
ತರುಲತೆಗಳು ಬಳುಕಿದರೆ ಭೂಮಿಗೆ ಪತ್ರಾಂಜಲಿ,
ಅರಿಶಿನ ಕುಂಕುಮದ ಅರ್ಚನೆ ಮುಂಜಾನೆ ಮಂಜಲಿ|

**- ಅನಿಲ್ ಭಾರದ್ವಾಜ**


Copyright © KCO – Brindavana

ಕ್ರೀಡೆ

## ಸ್ಥಳೀಯ ಕ್ರೀಡಾ ಚಟುವಟಿಕೆಗಳು



### ಜೆರ್ಸಿ ಕ್ರಿಕೆಟ್ ಲೀಗ್: ಕನ್ನಡದ ಕಟ್ಟೆ ಬಾಯ್ಸ್ ತಂಡದ ವಿಜಯೋತ್ಸವ !!!!

ರಾಜ್ಯದ ಪ್ರತಿಷ್ಟಿತ ಜೆರ್ಸಿ ಕ್ರಿಕೆಟ್ ಲೀಗ್ (JCL) ನ ಫೈನಲ್ಸ್ ತಲುಪಿದ್ದ ಕನ್ನಡದ' ಕಟ್ಟೆ ಬಾಯ್ಸ್ 'ಎದುರಾಳಿ ದೈತ್ಯ UCC (ದೆಹಲಿ) ತಂಡವನ್ನು ಬಗ್ಗು ಬಡಿದು ಜಯಭೇರಿ ಬಾರಿಸಿ ,ನ್ಯೂಜೆರ್ಸಿ ಕ್ರಿಕೆಟ್ ಚಾಂಪಿಯನ್ ಹೆಗ್ಗಳಿಕೆಗೆ ಭಾಜನರಾದರು.' ಕಟ್ಟೆ ಬಾಯ್ಸ್ ' ವಿಜಯೋತ್ಸವಕ್ಕೆ ಎಲ್ಲೆಡೆಯಿಂದ ಅಭಿಮಾನದ ಮಹಾಪೂರ ಹರಿದುಬರುತ್ತಿದೆ ,ವಿಜಯೀ ತಂಡಕ್ಕೆ

ಅಭಿನಂದನೆಗಳು.

## ಪ್ರತಿಭೆ

### ಏಕ್ತಾ ಕೃಷ್ಣಮೂರ್ತಿ

ಏಕ್ತಾ ಕೃಷ್ಣಮೂರ್ತಿ ನಾರ್ತ್ ಬ್ರೂನ್ಸ್ವಿಕ್ ಪ್ರೌಢ ಶಾಲೆಯ ೧೨ ನೆ ತರಗತಿಯ ವಿದ್ಯಾರ್ಥಿನಿ. ಕಳೆದ ೭ ವರ್ಷಗಳಿಂದ ಶ್ರೀಮತಿ ಸುಚಿತ್ರ ಲಕ್ಷ್ಮೀಶ ಅವರಿಂದ ಸಂಗೀತವನ್ನು ಅಭ್ಯಾಸ ಮಾಡುತ್ತಿದ್ದಾಳೆ. ಇದೇ ೨೭ ಸೆಪ್ಟೆಂಬರ್ ೨೦೧೫ ರಂದು ಸ್ಥಳೀಯ ಗುರುವಾಯುರಪ್ಪನ್ ದೇವಸ್ಥಾನದಲ್ಲಿ ಏಕ್ತಾಳ ಕರ್ನಾಟಕ ಶಾಸ್ತ್ರೀಯ ಸಂಗೀತದ ಗಾಯನವನ್ನು ಏರ್ಪಡಿಸಲಾಗಿತ್ತು.ಕುಮಾರಿ ಏಕ್ತಾ ,ಸಾಮಿ ನಿನ್ನೆ ವರ್ಣದಿಂದ ಸಂಗೀತ ಕಾರ್ಯಕ್ರಮವನ್ನು ಪ್ರಾರಂಭಿಸಿ ನಂತರ ಗಣಪತಿ ,ದೇವಿ ,ರಾಮ ಹಾಗು ಕೃಷ್ಣನ ಕೀರ್ತನೆಗಳನ್ನು ಹಾಡಿದಳು.



ಮುಖ್ಯವಾಗಿ ರಾಮನೀಸಮಾನ ಈ ಕೃತಿಯ ರಾಗ, ಸ್ವರ ನೆರವಲ್ ಗಳನ್ನು ಚೊಕ್ಕವಾಗಿ ನಿರೂಪಿಸಿದಳು . ಕಾರ್ಯಕ್ರಮವನ್ನು ತಿಲ್ಲಾನ ಮತ್ತು ಮಂಗಳದೊಂದಿಗೆ ಮುಕ್ತಾಯಗೊಳಿಸಿದಳು. ೨೦೧೪ರಲ್ಲಿ ಸುಶ್ರಾವ್ಯವಾದ ಸಂಗೀತ ಕಛೇರಿಯನ್ನು ಬೆಂಗಳೂರಿನ ಮಲ್ಲೇಶ್ವರಂ ರಾಮ ಮಂದಿರದಲ್ಲಿ ನೀಡಿದ್ದಾಳೆ.ಈ ೭ವರ್ಷಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾಳೆಂದು ಹೇಳಬಹುದು .ಇದಕ್ಕೆ ಕಾರಣಕರ್ತರಾದ ಗುರು ಶ್ರೀಮತಿ ಸುಚಿತ್ರ ಲಕ್ಷ್ಮೀಶ ಅವರನ್ನು ಈ ಸಂದರ್ಭದಲ್ಲಿ ಅಭಿನಂದಸಲೇಬೇಕು. ನಾಗಶ್ರಿ ಮತ್ತು ಬದರೀ ಅವರ ಪುತ್ರಿಯಾದ ಏಕ್ತಾಳಿಗೆ ಸಂಗೀತ ಕ್ಷೇತ್ರದಲ್ಲಿ ಉತ್ತಮ ಭವಿಷ್ಯವಿದೆ ಎಂದು ಹೇಳಬಹುದು.



### ಬೃಂದಾವನ ವಾಣಿ

ಕೇಳುತಿದೆ ಗಂಧರ್ವರ ಅಶರೀರವಾಣಿ
ವ್ಯಾಸ-ದಾಸ ದಾಸೋಹರ ಸಶರೀರವಾಣಿ
ಹರಡಲಿ ಕರುನಾಡ ಕಂಪಿನ ಇಂಪಿನ ವಾಣಿ
ಮನ-ಮನವನು ಬೆಳಗಲಿ ಬೃಂದಾವನ ವಾಣಿ
ಹೊರನಾಡ ಕನ್ನಡಿಗರ ವಾರ್ತೆಯಾಗಲಿ
ಕನ್ನಡ ಸಂಗೀತ-ಸಾಹಿತ್ಯದ ತೇರಾಗಲಿ
ಸುಮಧುರ ಸಂಬಂಧಗಳಿಗೆ ಬೆಸುಗೆಯಾಗಲಿ
ಕನ್ನಡ ಬಾಂಧವರ ಭಾವನೆಗಳಿಗೆ ಕೊಂಡಿಯಾಗಲಿ
ಮುನ್ನಡೆಯಲಿ ಬೃಂದಾವನದ ಗಜವಾಣಿ
ಅಕ್ಷರ ಭಂಡಾರದ ಶುಭವಾಣಿ....

**-ರಾಘವೇಂದ್ರ ಕುಂದಲಗುರ್ಕಿ**

(ವರ್ಣಚಿತ್ರ:ಕು.ಶ್ರೇಯ ರಾಘವೇಂದ್ರ)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕನ್ನಡ ಕೂಟದ ಮುಂಬರುವ ಚಟುವಟಿಕೆಗಳು







### ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದೆ, ನ್ಯೂ ಜೆರ್ಸಿ ಒಳಗೆ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂದವರೆಲ್ಲ ನಮ್ಮ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ - ಬೃಂದಾವನದ "ಸದಸ್ಯತ್ವ", ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿಧ್ಯಾರ್ಥಿ ಸದಸ್ಯತ್ವಗಳಲ್ಲಿ ನಿಮಗೆ ಸೂಕ್ತವಾದ ಸದಸ್ಯತ್ವ ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ, www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ, ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ, ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.

ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.

ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯ ಆರಾಧಿಸಿ ಕನ್ನಡದ ಕಂಪನ್ನ ಹರಡೋಣ.

### ಸೂಚನೆ:

ನ್ಯೂಜೆರ್ಸಿಯ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ .ವಾಣಿಯಲ್ಲಿ ಮೂಡಿಬರುವ ಅಂಕಣಗಳು- ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ,ಬಾಲಪ್ರತಿಭೆ, ಕ್ರೀಡೆ,ನಾಕಂಡಂತೆ. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ.
**ನಾಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು.ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ,ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.


Copyright © KCO – Brindavana